(ಇ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು 29ನೇ ಪಟ್ಟಿಯಲ್ಲಿರುವ

ಅಧ್ಯಕ್ಷರು :- ದಿನಾಂಕ 21.07.2003 ರ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 13 ಉತ್ತರಗಳನ್ನು ಹಾಗೂ ತಡೆಹಿಡಿಯಲಾದ 3 ಪ್ರಶ್ನೆಗಳ ಉತ್ತರವನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ 121 ಪ್ರಶ್ನೆಗಳ ಪೈಕಿ 107 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ **(ಅನುಬಂಧ - I)**

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, 31ನೇ ಪಟ್ಟಿಯಲ್ಲಿರುವ ದಿನಾಂಕ: 22.07.2003 ಲಿಖಿತ ಮೂಲಕ ಉತ್ತರಿಸುವ 116 ಪ್ರಶ್ನೆಗಳ ಪೈಕಿ 84 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. **(ಅನುಬಂಧ - II)**

ಅಧ್ಯಕ್ಷರು :- ಮಂಡಿಸಲಾಯಿತು.

3. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ :- ರಾಜ್ಯದ ಕಬ್ಬು ಬೆಳೆಗಾರರಿಗೆ ಕೇಂದ್ರ ಸರ್ಕಾರವು ನೆರವು ಒದಗಿಸುವ ಬಗ್ಗೆ

+ ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) :- ಮಾನ್ಯ ಅಧ್ಯಕ್ಷರೆ, ಇವತ್ತು ರಾಷ್ಟದ ಉದ್ದಗಲಕ್ಕೂ ಕೇರಳದಿಂದ ಉತ್ತರ ಪ್ರದೇಶದ ವರೆಗೆ ರಾಷ್ಟದ ಬಹುತೇಕ ಕಡೆ ಶೇಕಡಾ 80ಕ್ಕೂ ಹೆಚ್ಚಿನ ಭಾಗ ಕೃಷಿಯನ್ನು ಅವಲಂಬಿಸಿರತಕ್ಕ ರೈತರಲ್ಲಿ ಬಹುತೇಕ ಜನ ಕಬ್ಬನ್ನು ಬೆಳೆಯುತ್ತಿರತಕ್ಕಂಥದ್ದು ನಮಗೆಲ್ಲಾ ಕೂಡ ಗೊತ್ತಿರುವಂತಹ ವಿಷಯ. ಕರ್ನಾಟಕ ರಾಜ್ಯದಲ್ಲಿಯೂ ಕೂಡ ಸಣ್ಣ, ಮಧ್ಯಮ ಹಾಗೂ ದೊಡ್ಡ ರೈತರು ಕೂಡ ಈ ಕಬ್ಬನ್ನು ಬೆಳೆಯತಕ್ಕಂಥದ್ದನ್ನು ಬಹಳ ಹಿಂದಿನಿಂದ ಕೃಷಿಯನ್ನು ಮಾಡಿಕೊಂಡು ಬರುತ್ತಿದ್ದಾರೆ. ಕಬ್ಬು ಬೆಳೆಗಾರರು ಯಾವುದೇ ಒಂದು ತಾಂತ್ರಿಕತೆಯ ಸಹಾಯವಿಲ್ಲದೇ ಈ ಒಂದು ಕೃಷಿಯನ್ನು ಅವರು ತಮ್ಮದೇ ಆದಂತಹ ಒಂದು ಸಾಂಪ್ರದಾಯಕ ಮಾದರಿಯಲ್ಲಿ ಈ ಕೃಷಿಯನ್ನು ನಂಬಿಕೊಂಡು ಇವತ್ತು ಜೀವನ ಮಾಡುತ್ತಿದ್ದಾರೆ. ಅನೇಕ ರೈತರು ತಮ್ಮ ಜೀವನೋಪಾಯಕ್ಕೋಸ್ಕರ ಈ ಕೃಷಿಯನ್ನು ನಂಬಿಕೊಂಡಿರತಕ್ಕಂಥದ್ದು ಬಹುಶಃ ಈ ಸದನದಲ್ಲಿರತಕ್ಕ ಬಹುತೇಕ ಎಲ್ಲಾ ಸದಸ್ಯರಿಗೂ ಕೂಡ ಗೊತ್ತಿರುವಂತಹ ವಿಷಯ. ಇಂತಹ ಕಬ್ಬು ಬೆಳೆಗಾರರು ಇವತ್ತು ಸಂಕಷ್ಟಕ್ಕೆ ಸಿಕ್ಕಿರತಕ್ಕಂಥದ್ದು ಒಂದು ನಿರ್ವಿವಾದಂತಹ ಸಂಗತಿ. ದೇಶದ ಉದ್ದಗಲಕ್ಕೆ ಈ ಕಬ್ಬು ಬೆಳೆಯನ್ನು ನಂಬಿಕೊಂಡು ಜೀವನವನ್ನು ಸಾಗಿಸುತ್ತಿರುವಂಥ ಕಬ್ಬುಬೆಳೆಗಾರ, ಕಬ್ಬು ಬೆಳೆಯುವಂತಹ ರೈತ ಇವತ್ತು ಸಂಕಷ್ಟಕ್ಕೆ ಸಿಲುಕಿದ್ದಾನೆ. ಈ ರೈತನ ನೆರವಿಗೆ ಬರತಕ್ಕಂಥಹ ಕೆಲಸವನ್ನು ಸರ್ಕಾರಗಳು ಮಾಡಬೇಕಾಗುತ್ತದೆ. ಸಕ್ಕರೆ ಕಾರ್ಖಾನೆ ರೋಗಗ್ರಸ್ಥವಾದರೆ, ಅದರ ನೇರವಾದಂತಹ ಪರಿಣಾಮ ಈ ಒಂದು ಕೃಷಿ, ಕಬ್ಬು ಬೆಳೆ ಬೆಳೆಯುವಂತಹ ರೈತರ ಮೇಲೆ ಬೀಳತ್ತಿದೆ. ಸಕ್ಕರೆ ಫ್ಯಾಕ್ಟರಿ ಮುಚ್ಚಿದರೂ ರೈತರಿಗೇ ತೊಂದರೆ ಸಕ್ಕರೆ ಫ್ಯಾಕ್ಟರಿ ನಷ್ಟದಲ್ಲಿ ಅನುಭವಿಸುತ್ತಿದ್ದರೂ ಕೂಡ ಅದು ರೈತರಿಗೆ ತೊಂದರೆ, ಸಕ್ಕರೆ ಫ್ಯಾಕ್ಟರಿಯವರು ಸರಿಯಾಗಿ ಹಣವನ್ನು ಪಾವತಿ ಮಾಡದೇ ಇದ್ದರೆ ಅದೂ ಕೂಡ ರೈತರಿಗೆ ನೇರವಾಗಿ ತೊಂದರೆ. ಹೀಗೆ ಈ ರೋಗಗ್ರಸ್ಥ ಕಾರ್ಖಾನೆಗಳು ಇಡೀ ದೇಶದ ಉದ್ದಗಲಕ್ಕೂ ಇದೆ. ರೈತರನ್ನು ಈ ಒಂದು ಕೃಷಿಯನ್ನು ನಂಬಿಕೊಂಡಿರತಕ್ಕಂಥ, ಕಬ್ಬನ್ನು ಬೆಳೆಯುತ್ತಿರತಕ್ಕಂಥ ರೈತರನ್ನು ಸಂಕಷ್ಟಕ್ಕೆ ಸಿಲುಕುತ್ತಿರುವುದನ್ನು ನೋಡುತ್ತೇವೆ. ಆ ರೈತ ಕಣ್ಣೀರನ್ನು ಹರಿಸತಕ್ಕದ್ದನ್ನು ನಾವು ದಿನನಿತ್ಯ ಕೂಡ ನೋಡುತ್ತಿದ್ದೇವೆ. ಬಹುತೇಕವಾಗಿ ಕಬ್ಬನ್ನು ಬೆಳೆಯುತ್ತಿರತಕ್ಕವರು ಸಣ್ಣ ರೈತರು. ತಮ್ಮ ಜೀವನೋಪಾಯಕ್ಕೋಸ್ಕರವೇ

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಗಳನ್ನು ಪುರಸ್ಕರಿಸಿಲ್ಲವೆಂದು ಸೂಚಿಸುತ್ತದೆ.)

ಈ ಒಂದು ಕಬ್ಬು ಬೆಳೆಯನ್ನು ಬೆಳೆಯುತ್ತಾ ಬಂದಿದ್ದಾರೆ. ಕಬ್ಬು ಬೆಳೆಯಬೇಕಾದರೆ ನೀರಾವರಿ ಸೌಲಭ್ಯ ಶಾಶ್ವತವಾದಂತಹದ್ದು ಇದೆಯೋ ಇಲ್ಲವೋ? ಕಬ್ಬನ್ನು ಬೆಳೆಯತಕ್ಕಂಥ ರೈತ ಮಳೆಯನ್ನು ಆಧರಿಸಿ ಇವತ್ತು ಕಬ್ಬನ್ನು ಬೆಳೆಯುತ್ತಿದ್ದಾನೆ. ತಾನು ಕೊರೆದಿರತಕ್ಕಂಥ ಕೊಳವೆ ಬಾವಿಗಳ ಮೂಲಕ, ಪಂಪುಸೆಟ್ಟಿನ ಮೂಲಕ ಇವತ್ತು ಕಬ್ಬನ್ನು ಬೆಳೆಯುತ್ತಿದ್ದಾನೆ. ಅನೇಕ ಕಡೆ ಶಾಶ್ವತವಾಗಿ ನೀರಾವರಿ ಸೌಲಭ್ಯ ಇರುವಂತಹ ಕಡೆ ಕೂಡ ಕಬ್ಬನ್ನು ಬೆಳೆಯುತ್ತಿದ್ದಾನೆ. ಒಟ್ಟಾರೆ ಈ ದೇಶದ ಬಹುತೇಕ ಕಡೆ ಕಬ್ಬು ಬೆಳೆಗಾರರು ಏನು ಇದ್ದಾರೆ? ಆ ಕಬ್ಬು ಬೆಳೆಗಾರರು ರಾಜ್ಯ ಮತ್ತು ರಾಷ್ಟ್ರದ ಎಲ್ಲಾ ಕಡೆ ಕೂಡ ಸಂಕಷ್ಟಕ್ಕೆ ಸಿಲುಕಿರುವುದನ್ನು ನಾವೆಲ್ಲರೂ ಮನಗಂಡು ಇವತ್ತು ಆ ರೈತನ ನೆರವಿಗೆ ಹೋಗತಕ್ಕಂಥ ಜವಾಬ್ದಾರಿಯನ್ನು ನಾವು ಎಷ್ಟರಮಟ್ಟಿಗೆ ಮಾಡುತ್ತಿದ್ದೇವೆ. ಎನ್ನುವ ಬಗ್ಗೆ ಒಂದೇ ಒಂದು ಉದಾಹರಣೆ ಕೊಡುತ್ತೇನೆ. ಇವತ್ತು ಮೊನ್ನೆ ನಾಲ್ಕು ದಿವಸಗಳ ಹಿಂದೆ ಕೇಂದ್ರ ಸರ್ಕಾರದವರು ಕಬ್ಬು ಬೆಳೆಗಾರರ ನೆರವಿಗೆ ಬರತಕ್ಕಂಥ ಒಂದು ದೊಡ್ಡ ಮನಸ್ಸನ್ನು ಮಾಡಿದೆ. ಸಂತೋಷ. ಈ ರಾಷ್ಟ್ರದಲ್ಲಿ ಎಲ್ಲಿಯಾದರೂ ಕೂಡ ರೈತರ ನೆರವಿಗೆ ಸರ್ಕಾರ ಬರುತ್ತದೆ ಎಂದರೆ ಅದನ್ನು ನಾವು ಬಹಳ ತುಂಬು ಹೃದಯದಿಂದ ಸ್ವಾಗತಿಸುತ್ತೇವೆ. ಆದರೆ ಇದೇ ರೈತ ದೇಶದ ಎಲ್ಲಾ ಕಡೆ ಇರತಕ್ಕಂಥಹ ಸಂದರ್ಭದಲ್ಲಿ ಇದೇ ರೈತರ ಕಣ್ಣೀರು ಎಲ್ಲಾ ಕಡೆ ಹರಿಯುತ್ತಿರುವಂಥಹ ಸಂದರ್ಭದಲ್ಲಿ ಎಲ್ಲಾ ರೈತರ ನೆರವಿಗೆ ಬರತಕ್ಕಂಥ ಒಂದು ಜವಾಬ್ದಾರಿ ಇವತ್ತು ಕೇಂದ್ರ ಸರ್ಕಾರದ ಮೇಲೆಯೂ ಇದೆ ಎನ್ನುವುದನ್ನು ನಾವೆಲ್ಲರೂ ಕೂಡ ಮನಗಾಣಬೇಕಾಗಿದೆ. ಕೇಂದ್ರ ಸರ್ಕಾರ ಈ ಕಬ್ಬು ಬೆಳೆಗಾರನ ನೆರವಿಗೆ ಬರತಕ್ಕಂಥಹ ಸಂದರ್ಭದಲ್ಲಿ ಇಡೀ ರಾಷ್ಟ್ರದ ಉದ್ದಗಲಕ್ಕೂ ಕಬ್ಬುಬೆಳೆಗಾರರು ಇದ್ದಾರೆ, ಎನ್ನುವಂತಹದನ್ನು ಮನಗಂಡೂ ಸಹ ಕೇವಲ ಯಾವ ಉದ್ದೇಶದಿಂದ, ಯಾವ ಸದುದ್ದೇಶ ಇದರ ಹಿಂದೆ ಅಡಗಿದೆಯೋ ಗೊತ್ತಿಲ್ಲ. ಆದರೆ ಇವರು ನೆರವನ್ನು ಕೊಡತಕ್ಕಂಥಹದು, ಕಬ್ಬು ಬೆಳೆಗಾರರಿಗೆ ನೆರವನ್ನು ಕೊಡತಕ್ಕಂಥಹ ಕೆಲಸವನ್ನು ಕೇವಲ ಉತ್ತರ ಪ್ರದೇಶ, ಹರ್ಯಾಣ ಮತ್ತು ಉತ್ತರಾಂಚಲ್ ರಾಜ್ಯಗಳಿಗೆ ಮಾತ್ರ ಸೀಮಿತಗೊಂಡಂತೆ ಇವತ್ತು ಕೇಂದ್ರ ಸರ್ಕಾರ ಈ ಒಂದು ಯೋಜನೆಯನ್ನು ಒನ್ ಟೈಮ್ ಹೆಲ್ಪ್, ಅದನ್ನು ಅನೌನ್ಸ್ ಮಾಡಿದ್ದಾರೆ ಇವತ್ತು ನಾನು ಈಗಾಗಲೇ ಹೇಳಿದ ಹಾಗೆ ಉತ್ತರ ಪ್ರದೇಶದಲ್ಲಿರತಕ್ಕಂಥ ರೈತರಿಗೆ, ಹರ್ಯಾಣ ರಾಜ್ಯದಲ್ಲಿ ಇರತಕ್ಕಂಥ ಕಬ್ಬು ಬೆಳೆಗಾರನಿಗೆ....

ಶ್ರೀ ಆರಗ ಜ್ಞಾನೇಂದ್ರ :– ಮಾನ್ಯ ಅಧ್ಯಕ್ಷರೆ, ಈಗ ಉತ್ತರ ಕೊಡಲಿಕ್ಕೆ ಆಗದೇ ಇರುವಂಥಹ ಎಲ್ಲಾ ಸಂಗತಿಗಳನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಬಹುದಾ?

ಗೊಂದಲ

ಶ್ರೀ ಎಸ್.ಪಿ. ಮುದ್ದಹನುಮೇಗೌಡ :– ನೀವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಂ.ಎಸ್. ಆತ್ಮಾನಂದ :– ನೀವು ಬೇರೆಯದಕ್ಕೆಲ್ಲಾ ಪ್ರಸ್ತಾಪ ಮಾಡುವುದಿಲ್ಲವಾ?

ಅಧ್ಯಕ್ಷರು :– ಶೂನ್ಯ ವೇಳೆ ವಿಚಾರಕ್ಕೆ ಉತ್ತರ ಕೊಡಬೇಕಾಗಿಲ್ಲ ಎಂದು ನಾನು ಹೇಳುತ್ತಿದ್ದೇನಲ್ಲಾ?

ಗೊಂದಲ

ಶ್ರೀ ಆರಗ ಜ್ಞಾನೇಂದ್ರ :– ಈ ಪ್ರಪಂಚದ ಎಲ್ಲಾ ಸಂಗತಿಗಳನ್ನು ಪ್ರಸ್ತಾಪ ಮಾಡಬಹುದಾ?

ಅಧ್ಯಕ್ಷರು :– ಹಾಗಲ್ಲ, ಅವರು ಮಾತನಾಡುವ ವಿಚಾರ ಕೇಂದ್ರ ಸರ್ಕಾರದ ಗಮನಕ್ಕಾದರೂ ಬರುತ್ತದಲ್ಲಾ? ಶೂನ್ಯ ವೇಳೆ ವಿಚಾರಕ್ಕೆ ಉತ್ತರ ಬೇಕಾಗಿಲ್ಲ ಎಂದು ಹೇಳುತ್ತಿದ್ದೇನಲ್ಲಾ.

ಗೊಂದಲ

ಶ್ರೀ ಆರಗ ಜ್ಞಾನೇಂದ್ರ :– ಪಾರ್ಲಿಮೆಂಟಿನಲ್ಲಿ ವಿಚಾರ ಪ್ರಸ್ತಾಪ ಮಾಡುವುದಕ್ಕೆ ವೇದಿಕೆ ಇದೆಯಲ್ಲಾ?

ಅಧ್ಯಕ್ಷರು :– ಪಾರ್ಲಿಮೆಂಟ್ ಮೆಂಬರ್ಸೇ ಕೇಳಬೇಕು ಎಂದರೆ ಹೇಗೆ? ಇಲ್ಲಿ ನಮ್ಮ ಸದಸ್ಯರೂ ಕೇಳಲಿ ಬಿಡಿ.

ಶ್ರೀ ಕೆ. ಶ್ರೀನಿವಾಸ ಗೌಡ (ಕುಡುವನಹಳ್ಳಿ) :– ಅವರು ಒಳ್ಳೆಯ ವಿಷಯ ಮಾತನಾಡುತ್ತಿದ್ದಾರೆ. ಅದಕ್ಕೆ ಅವಕಾಶ ಕೊಡಬೇಕು.

ಗೊಂದಲ

ಶ್ರೀ ಆರಗ ಜ್ಞಾನೇಂದ್ರ :– ಈ ಸದನದಲ್ಲಿ ಸಮಯದ ದೃಷ್ಟಿಯಿಂದ ಮಾತನಾಡಲಿ.

ಗೊಂದಲ

ಅಧ್ಯಕ್ಷರು :– ಶೂನ್ಯ ವೇಳೆಯಲ್ಲಿ ಉತ್ತರ ಕೊಡಬೇಕಾಗಿಲ್ಲ. ಇಷ್ಟರೊಳಗೆ ಅವರು ಮುಗಿಸುತ್ತಿದ್ದರು.

ಶ್ರೀ ಆರಗ ಜ್ಞಾನೇಂದ್ರ :– ಈ ವಿಚಾರ ಪ್ರಸ್ತಾಪ ಮಾಡಲು ಸಾಕಷ್ಟು ಅವಕಾಶಗಳು ಇವೆ. ಇದಕ್ಕೆ ಅವಕಾಶ ಕೊಡಬಾರದು.

ಅಧ್ಯಕ್ಷರು :– ಶೂನ್ಯ ವೇಳೆ ವಿಚಾರಕ್ಕೆ ಉತ್ತರ ಕೊಡಬೇಕಾಗಿಲ್ಲ ಎಂದು ಹೇಳುತ್ತಿದ್ದೇನಲ್ಲಾ. ಮಾನ್ಯ ಮುದ್ದಹನುಮೇಗೌಡರು ಮಾತನಾಡಿ, ಮಾನ್ಯ ಆರಗ ಜ್ಞಾನೇಂದ್ರ ಅವರೇ ತಾವು ಕೊಡಿ.

ಗೊಂದಲ

ಅಧ್ಯಕ್ಷರು :– ಶೂನ್ಯ ವೇಳೆಯ ವಿಚಾರಕ್ಕೆ ಉತ್ತರ ಕೊಡಬೇಕಾಗಿಲ್ಲ. ಕೊನೆಯ ಪಕ್ಷ ಕೇಂದ್ರ ಸರ್ಕಾರದ ಗಮನಕ್ಕಾದರೂ ಬರಲಿ.

ಶ್ರೀ ಆರಗ ಜ್ಞಾನೇಂದ್ರ :– ಯಾವ ಸರ್ಕಾರದ ಗಮನಕ್ಕೆ?

ಅಧ್ಯಕ್ಷರು :– ರಾಜ್ಯ ಸರ್ಕಾರದವರ ಗಮನಕ್ಕೆ ಬರಲಿ.

ಶ್ರೀ ಕೆ. ಶ್ರೀನಿವಾಸ ಗೌಡ (ಕೊಡವನಹಳ್ಳಿ) :– ಮಾನ್ಯ ಮುದ್ದಹನುಮೇಗೌಡರ ಒಳ್ಳೆಯ ವಿಚಾರ ಮಾತನಾಡುತ್ತಿದ್ದಾರೆ, ಅವರಿಗೆ ಅವಕಾಶ ಕೊಡಿ.

ಗೊಂದಲ

4.20 ಪಿ.ಎಂ

ಅಧ್ಯಕ್ಷರು :– ಕೇಂದ್ರ ಸರ್ಕಾರದ ಗಮನಕ್ಕಾದರೂ ಬರಲೆಂದು ನಾನು ಹೇಳುತ್ತಿರುವುದು. ರಾಜ್ಯ ಸರ್ಕಾರದ ಗಮನಕ್ಕೂ ಬರಲಿ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ :– ಕೇಂದ್ರ ಸರ್ಕಾರಕ್ಕೆ ಕಬ್ಬು ಬಎಳೆಗಾರರ ಸಮಸ್ಯೆಗಳನ್ನು ತೆಗೆದುಕೊಂಡು ಹೋಗಿದ್ದಾರೆಯೇ? ಹೇಗೆ? ಅವರು ಅದನ್ನು ಹೇಳಲಿ.

ಅಧ್ಯಕ್ಷರು :– ಆತ್ಮಾನಂದರವರು ಹೇಳುತ್ತಾರೆ, ಬಿಡಿ.

ಶ್ರೀ ಜಗದೀಶ್ ಶೆಟ್ಟರ್ :– ನಮ್ಮ ರಾಜ್ಯದ ಕಬ್ಬು ಬೆಳೆಗಾರರ ಸಮಸ್ಯೆಗಳಿಗೆ ಇವರು ಎಷ್ಟು ಸ್ಪಂದಿಸಿದ್ದಾರೆ? ಮತ್ತು ಕೇಂದ್ರ ಸರ್ಕಾರ ಏನು ನೆರವು ನೀಡುತ್ತದೆ, ಅದರ ಬಗ್ಗೆ ಏನಾದರೂ ಅಪ್ರೋಚ್ ಆಗಿದ್ದಾರೆಯೇ? ಹೇಗೆ?

ಅಧ್ಯಕ್ಷರು :– ಅಗ್ರಿಕಲ್ಚರಲ್ ಡಿಮ್ಯಾಂಡ್ ಬರುತ್ತದಲ್ಲಾ ಆಗ ಮಾತನಾಡುತ್ತಾರೆ. ಬಿಡಿ. ಈಗ ಮುದ್ದಹನುಮೇಗೌಡರೆ, ತಾವು ಮಾತನಾಡಿ ಮುಗಿಸಿ.

ಗೊಂದಲ

ಶ್ರೀ ಆರಗ ಜ್ಞಾನೇಂದ್ರ :– ಕೇಂದ್ರ ಸರ್ಕಾರವನ್ನು ಆರೋಪ ಮಾಡುವ ಬದಲು ರಾಜ್ಯದ ರೈತರನ್ನು ರಕ್ಷಿಸುವುದಕ್ಕೆ ನೀವೇನು ಮಾಡಿದ್ದೀರಿ? ಅದನ್ನು ಹೇಳಬೇಕು. ಇಲ್ಲಿ ರಾಜಕಾರಣ ಮಾಡುವುದೇ?

ಅಧ್ಯಕ್ಷರು :– ಮಾನ್ಯ ಸದಸ್ಯರಾದ ಮುದ್ದಹನುಮೇಗೌಡರು ಮಾತನಾಡುವುದನ್ನು ಹೊರತುಪಡಿಸಿ ಬೇರೆ ಯಾರೇ ಮಾನ್ಯ ಸದಸ್ಯರು ಮಾತನಾಡಿದರೂ ಬರೆದುಕೊಳ್ಳಬೇಡಿ. I have allowed Mr. Muddahanume gowda. ತಾವು ಮಾತನಾಡಿ ಮುಗಿಸಿ.

ಗೊಂದಲ

ಅಧ್ಯಕ್ಷರು :– ಉತ್ತರ ಹೇಳಬೇಕಾಗಿಲ್ಲವೆಂದು ಹೇಳುತ್ತಿದ್ದೇನಲ್ಲಾ ಅಗ್ರಿಕಲ್ಚರ್ ಮಿನಿಸ್ಟರ್ ಬಂದಾಗ ಹೇಳುತ್ತಾರೆ ಬಿಡಿ.

ಶ್ರೀ ಡಿ. ಬಿ. ಚಂದ್ರೇಗೌಡ :– ಮಾನ್ಯ ಸಭಾಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಸದಸ್ಯರಿಗೆ ಪ್ರಸ್ತಾಪ ಮಾಡುವ ಹಕ್ಕು ಇದೆ, ಇದಕ್ಕೆ ಅವಕಾಶ ಮಾಡಿಕೊಡುವ ಜವಾಬ್ದಾರಿ ತಮ್ಮದಾಗಿದೆ. ತಾವು ಆಗಲೇ ಅವಕಾಶ ಕೊಟ್ಟಿದ್ದೀರಿ. ಅವಕಾಶ ಕೊಟ್ಟ ನಂತರ ಅದನ್ನು ಕೇಳುವುದಕ್ಕೆ ಮಧ್ಯೆ ಇವರು ಕೇಂದ್ರ ಸರ್ಕಾರಕ್ಕೆ ಯಾರದ್ದೂವಕಾಲತ್ತು ಬೇಕಾಗಿಲ್ಲ ಕೇಂದ್ರ ಸರ್ಕಾರದವರಿಗೆ ವಕಾಲತ್ತು ಬೇಡ.

ಗೊಂದಲ

ಶ್ರೀ ಡಿ.ಬಿ. ಚಂದ್ರೇಗೌಡ :– ಕೇಂದ್ರ ಸರ್ಕಾರ ಕೂಡ ಸ್ವರ್ಗಲೋಕದಿಂದ ಇಳಿದಿದ್ದಲ್ಲ, ಜನರು ಆರಿಸಿ ಕಳುಹಿಸಿರುವುದು.

ಗೊಂದಲ

ಅಧ್ಯಕ್ಷರು :– ಅಗ್ರಿಕಲ್ಚರ್ ಡಿಮ್ಯಾಂಡ್ಸ್ ಬಂದಾಗ ಮಾತನಾಡಿ. ಆಗ ಇದನ್ನೇ ಒಂದು ಗಂಟೆ ಚರ್ಚೆ ಮಾಡೋಣ ಬಿಡಿ.

ಶ್ರೀ ಆರಗ ಜ್ಞಾನೇಂದ್ರ :– ಈ ರಾಜ್ಯದಲ್ಲಿ ಕಬ್ಬಿನ ಬೆಳೆಗೆ ಬೆಂಕಿ ಹಚ್ಚಿದ್ದಾರಲ್ಲಾ.

ಗೊಂದಲ

ಅಧ್ಯಕ್ಷರು :– ಮುದ್ದಹನುಮೇಗೌಡರೆ, ತಾವು ಮಾತನಾಡಿ ಮುಗಿಸುತ್ತೀರೋ ಇಲ್ಲವೋ?

ಶ್ರೀ ಎಸ್.ಪಿ. ಮುದ್ದಹನುಮೇಗೌಡ :– ಮುಗಿಸುತ್ತೇನೆ. ದಯಮಾಡಿ ಮಾನ್ಯ ಸದಸ್ಯರಾದ ಪೂಜಾರ್ ಹಾಗೂ ಆರಗ ಜ್ಞಾನೇಂದ್ರವರು ಕುಳಿತುಕೊಳ್ಳಬೇಕು. ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಕಬ್ಬು ಬೆಳೆಯುತ್ತಿರುವ ರೈತನ ಬಗ್ಗೆ ಧ್ವನಿ ಎತ್ತತಕ್ಕಂಥ ಅಧಿಕಾರ ಇವೊತ್ತು ಯಾವ ಸದಸ್ಯರಿಗೂ ಇಲ್ಲವೆಂಬ ಮಾತನ್ನು ನಮ್ಮ ಸ್ನೇಹಿತರು ಹೇಳಿರುವುದಕ್ಕೆ ಅದಕ್ಕಿಂತಲೂ ದುರಂತ ಹಾಗೂ ದುರದೃಷ್ಟಕರವಾದ ಸಂಗತಿ ಬೇರೊಂದಿಲ್ಲ. ಇವೊತ್ತು ನಾನು, ನೀವು, ಇಲ್ಲಿ ಕುಳಿತಿರುವ ಸದಸ್ಯರು.....

ಗೊಂದಲ

Mr. Speaker :- Don't take down. ಅವರು ಎಷ್ಟು ಹೊತ್ತು ಕೂಗಾಡುತ್ತಾರೋ ಕೂಗಾಡಲಿ

x x ಗೊಂದಲ

ಶ್ರೀ ಎಸ್.ಪಿ. ಮುದ್ದಹನುಮೇಗೌಡ :- ದಯಮಾಡಿ ಮಾನ್ಯ ಸದಸ್ಯರಾದ ಆರಗ ಜ್ಞಾನೇಂದ್ರರವರು ತಿಳಿದುಕೊಳ್ಳಬೇಕು. ನಾನು ಇಲ್ಲಿ ಯಾರ ಬಗ್ಗೆಯೂ ವಕಾಲತ್ತು ಮಾಡುವುದಕ್ಕಾಗಲಿ ಅಥವಾ ಯಾರ ಬಗ್ಗೆಯೂ ದೋಷಾರೋಪಣೆ ಮಾಡುವುದಕ್ಕೆ ಬಂದಿಲ್ಲ. ಇವೊತ್ತು ರಾಜ್ಯದ ಕಬ್ಬು ಬೆಳೆಗಾರರು ಅನುಭವಿಸುತ್ತಿರುವ ಸಂಕಷ್ಟ ನೋವುಗಳೇನಿವೆ. ಅದರ ಬಗ್ಗೆ ಸರ್ಕಾರದ ಗಮನ ಸೆಳೆದು ತನ್ಮೂಲಕ ಇವೊತ್ತು ಕಬ್ಬು ಬೆಳೆಗಾರರಿಗೆ ಆಗಿರುವ ಅನ್ಯಾಯದ ಬಗ್ಗೆ ರಾಜ್ಯ ಮತ್ತು ರಾಷ್ಟ್ರದ ಜನತೆಗೆ ತಿಳಿಸೋಣವೆಂಬ ಉದ್ದೇಶದಿಂದ ನಾನು ಇಲ್ಲಿ ಮಾತನಾಡುತ್ತಿದ್ದೇನೆಯೇ ವಿನಾ ಯಾವುದೇ ಒಂದು ಸರ್ಕಾರದ ಬಗ್ಗೆ ವಕಾಲತ್ತು ವಹಿಸಲು ನಾನು ಇಲ್ಲಿಗೆ ಬಂದಿಲ್ಲ. ನಾನು ಹೇಳುತ್ತಿರುವ ಯಾವುದಾದರೂ ತಪ್ಪಾಗಿದ್ದರೆ ಅದರ ಬಗ್ಗೆ ಅವರು ಹೇಳಲಿ. ಈ ತರಹ ಅಲಿಗೇಶನ್. ದೋಷಾರೋಪಣೆ ಮಾಡುತ್ತಿರುವುದು ಸರಿಯಿಲ್ಲವೆಂದು ಹೇಳಲಿ. ಆದರೆ, ನಾನು ಮಾಡತನಾಡುತ್ತಿರುವುದೇನೆಂದರೆ, I am speaking with all responsibilities and it is in good taste. ಆದುದರಿಂದ ನಾನು ಪ್ರಶ್ನೆ ಮಾಡುತ್ತಿರುವುದಿಷ್ಟೆ: ಏಕಕಾಲೀನ ಹಣಕಾಸು ನೆರವು ಎಂದು ಇವೊತ್ತು ಕೆಂದ್ರ ಸರ್ಕಾರ ಕೇವಲ ಮೂರು ರಾಜ್ಯಗಳಿಗೆ ಮಾತ್ರ ಕೊಟ್ಟಿದೆ. ಇದಕ್ಕೆ ಕೇಂದ್ರ ಸರ್ಕಾರ ಅನುಸರಿಸಿರುವ ಮಾನದಂಡವೇನು? ಕಬ್ಬು ಬೆಳೆಗಾರರು ಕೇವಲ ಈ ಮೂರು ರಾಜ್ಯಗಳಲ್ಲಿ ಮಾತ್ರ ಇದ್ದಾರೆಯೇ? ಕರ್ನಾಟಕದಲ್ಲಿ ಕಬ್ಬು ಬೆಳೆಗಾರರು ಇಲ್ಲವೇ? ತಮಿಳುನಾಡಿನಲ್ಲಿ ಇಲ್ಲವೇ? ಮಹಾರಾಷ್ಟ್ರದಲ್ಲಿ ಇಲ್ಲವೇ? ಇವೊತ್ತು ರಾಜ್ಯದ ಎಲ್ಲಾ ಕಡೆಗಳಲ್ಲಿ ಕಬ್ಬು ಬೆಳೆಗಾರರು ಇರುವ ಸಂದರ್ಭದಲ್ಲಿ ಯಾವುದೇ ಮಾನದಂಡವನ್ನು ಅವರು ಹೇಳದೆ ಏಕಾಏಕಿ ಕೇವಲ ಮೂರು ರಾಜ್ಯಗಳಿಗೆ ಮಾತ್ರ ನೆರವು ನೀಡುವ ಏನು ಯೋಜನೆ ಪ್ರಕಟಿಸಿದ್ದಾರೆ, ಅದು ಖಂಡನೀಯ, ಸರಿಯಲ್ಲವೆಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಸುರೇಸ್‌ಕುಮಾರ್ :- ಒಂದು ನಿಮಿಷ. Point of order

ಗೊಂದಲ

ಅಧ್ಯಕ್ಷರು :- ಇದು ಶೂನ್ಯ ವೇಳೆ. ಈಗ ನೀವೇನೂ ಹೇಳಬೇಕಾಗಿಲ್ಲ. ಶೂನ್ಯ ವೇಳೆಯಲ್ಲಿ No point of order.

ಶ್ರೀ ಎಸ್. ಸುರೇಶ್ ಕುಮಾರ್ :- ನಾನು ಮಾನ್ಯ ಸದಸ್ಯರಾದ ಮುದ್ದಹನುಮೇಗೌಡರು ಹೇಳಿದ್ದೆಲ್ಲವನ್ನೂ ಕೇಳಿದ್ದೇನೆ. ತಾವು ರೈತರ ಕಷ್ಟದ ಬಗ್ಗೆ ಚೆನ್ನಾಗಿ ಹೇಳುತ್ತಿದ್ದೀರಿ, ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಇದೇ ಸದನದಲ್ಲಿ ಒಂದು ರೂಲಿಂಗ್ ಇದೆ. ಯಾವುದೇ ಕಾರಣದಿಂದ ಕೇಂದ್ರ ಸರ್ಕಾರದ ಬಗ್ಗೆ ಅಲಿಗೇಶನ್ criticise ಮಾಡುವುದು ಈ ಸದನಕ್ಕೆ....

ಗೊಂದಲ

ಅಧ್ಯಕ್ಷರು :- ಅವರು ರಾಜ್ಯ ಸರ್ಕಾರವನ್ನೂ ಸೇರಿಸಿದ್ದಾರೆ.

ಶ್ರೀ ಎಸ್. ಸುರೇಶ್‌ಕುಮಾರ್ :- ನಾನು ತಮ್ಮ ಗಮನಕ್ಕೆ ಒಂದು ರೂಲಿಂಗ್ ತರುತ್ತೇನೆ. On 24th December, 1963, while speaking on additional and supplimentary demands, the Hon'ble member Sri. S. Gopala Gowda

(xx ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ರೆಕಾರ್ಡ್ ಮಾಡಲಾಗಿಲ್ಲ.)

criticised the delay in payment of grants i.e., Central Government in respect of Mangalore Port Project. Thereopon, the Hon'ble Speaker observed the criticism of the Central Government is not correct. I will not permit criticism of the function of the Central Government ಎಂದು Hon'ble Speaker ಅವರು ರೂಲಿಂಗ್ ಕೊಟ್ಟಿದ್ದಾರೆ. ತಮ್ಮ ರೂಲಿಂಗ್ ಬೇಕಾದರೆ ಕೊಡಿ.

ಅಧ್ಯಕ್ಷರು :– ಮಾನ್ಯ ಮುದ್ದಹನುಮೇಗೌಡರೆ, ಅವರು ಒಂದು ರೂಲಿಂಗ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನನ್ನ ರಿಕ್ವೆಸ್ಟ್ ಏನೆಂದರೆ, ತಾವು ಕೇಂದ್ರ ಸರ್ಕಾರದ ಬಗ್ಗೆ ಮಾತನಾಡಬೇಡಿ. ರಾಜ್ಯ ಸರ್ಕಾರದ ಬಗ್ಗೆ ಮಾತನಾಡಿ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :– ನಾನು ಪ್ರಾರ್ಥನೆ ಮಾಡುತ್ತಿದ್ದೇನೆ ಸ್ವಾಮಿ, ನಾನು ಅವರನ್ನು ದೂರುತ್ತಿಲ್ಲ. ನಾನು criticise ಮಾಡುತ್ತಿಲ್ಲ.

+ ಶ್ರೀ ಪಿ.ಜಿ. ಆರ್. ಸಿಂಧ್ಯಾ (ಕನಕಪುರ) :– ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ನಾನು ತಮ್ಮನ್ನು ಭೇಟಿ ಮಾಡಿದ್ದೆ. ಮಾನ್ಯ ಸದಸ್ಯರಾದ ಮುದ್ದಹನುಮೇಗೌಡರು ಪ್ರಸ್ತಾಪಿಸಿರುವ ವಿಷಯದ ಬಗ್ಗೆ ಎರಡು ನಿಮಿಷ ಮಾತನಾಡಲು ತಾವು ಅವಕಾಶ ಕಲ್ಪಿಸಿಕೊಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಂಡಿದ್ದೇನೆ. ದಯಮಾಡಿ ನನಗೆ ಅವಕಾಶ ಮಾಡಿಕೊಡಬೇಕು. ಮುದ್ದಹನುಮೇಗೌಡರು ಇವೊತ್ತು ಏನು ವಿಚಾರ ಪ್ರಸ್ತಾಪ ಮಾಡಿದ್ದಾರೆ ಮತ್ತು ಅದರ ಬಗ್ಗೆ ಮಾನ್ಯ ಸದಸ್ಯರಾದ ಸುರೇಶ್‌ಕುಮಾರ್‌ರವರು ಪ್ರಸ್ತಾಪಿಸಿರುವ ರೂಲಿಂಗ್ ಅನ್ನು ಸಹ ನಾನೂ ಎತ್ತಿ ಹಿಡಿಯುತ್ತೇನೆ. ಆದರೆ, ಪ್ರಶ್ನೆ ಏನಿದೆಯೆಂದರೆ ಇವೊತ್ತು ಕೇಂದ್ರ ಸರ್ಕಾರವನ್ನು ದೂಷಣೆ ಮಾಡುವುದು ಒಂದು ಭಾಗವಾಯಿತು. ಲೋಕಸಭೆ ಮತ್ತು ರಾಜ್ಯಸಭೆ ಅಧಿವೇಶನ ನಿನ್ನೆಯಿಂದ ಪ್ರಾರಂಭವಾಗಿದೆ ಪ್ರಾರಂಭವಾಗುವುದಕ್ಕೆ ಮುನ್ನ ಸಾಮಾನ್ಯವಾಗಿ ಯಾವುದೇ ರಾಜ್ಯದ ಮುಖ್ಯಮಂತ್ರಿಗಳು ಆಯಾ ರಾಜ್ಯಗಳ ಲೋಕಸಭಾ ಮತ್ತು ರಾಜ್ಯಸಭಾ ಸದಸ್ಯರುಗಳ ಸಭೆ ಕರೆದು ರಾಜ್ಯದ ಮುಂದಿರುವ ಸಮಸ್ಯೆಗಳನ್ನು ಅವರು ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ ಪ್ರತಿಧ್ವನಿಸಬೇಕೆಂದು ತಿಳಿಸುವುದು ವಾಡಿಕೆ. ಅದೇ ರೀತಿ ಈ ಸಲವೂ ಮಾನ್ಯ ಮುಖ್ಯಮಂತ್ರಿಗಳು ಲೋಕಸಭೆ ಮತ್ತು ರಾಜ್ಯಸಭೆಯ ಎಲ್ಲಾ ಸದಸ್ಯರುಗಳನ್ನೂ ಕರೆದು ಕೇಳುವ ಮೂಲಕ ಈ ವಿಚಾರ ಪ್ರಸ್ತಾಪ ಮಾಡಿದ್ದಾರೆಯೇ ಎನ್ನುವುದನ್ನು ಸರ್ಕಾರ ತಿಳಿಸಬೇಕು. ಏಕೆಂದರೆ, ನಮ್ಮ ರಾಜ್ಯದಲ್ಲಿ ಸುಮಾರು 1,400 ಕೋಟಿ ರೂಪಾಯಿಗಳಷ್ಟು ಸಕ್ಕರೆಯ ದಾಸ್ತನು ಇದೆಯೆಂದು ಮಾನ್ಯ ಮಂತ್ರಿಗಳು ಕಳೆದ ಅಧಿವೇಶನದಲ್ಲಿ ಉತ್ತರ ಕೊಟ್ಟಿರುವುದನ್ನು ನಾನು ಕೇಳಿದ್ದೇನೆ. ಬರಗಾಲದ ಈ ಸಂದರ್ಭದಲ್ಲಿ ರೈತರು ಬಹಳ ಸಂಕಷ್ಟದಲ್ಲಿದ್ದು, ಅವರು ಕಷ್ಟಪಟ್ಟು ಬೆಳೆದ ಕಬ್ಬನ್ನು ತೆಗೆದುಕೊಂಡು ಹೋಗಿ ಅದನ್ನು ಫ್ಯಾಕ್ಟರಿಯಲ್ಲಿ ಆರೆಸಿದ್ದಾರೆ. ಆದರೆ ದುಡ್ಡು ಪೂರ್ತಿಯಾಗಿ ಬಾರದೆ ಅವರು ತೊಂದರೆಯಲ್ಲಿದ್ದಾರೆ. ಆ ದುಡ್ಡು ಬಂದರೆ ಅವರಿಗೆ ಸ್ವಲ್ಪ ಸಹಾಯವಾಗುತ್ತದೆನ್ನುವ ದೃಷ್ಟಿಯಿಂದ ನಾನು ಈ ವಿಚಾರ ಪ್ರಸ್ತಾಪ ಮಾಡುತ್ತಿದ್ದೇನೆ. ಕಳೆದ ಬಾರಿ ಬಜೆಟ್ ಅಧಿವೇಶನದಲ್ಲಿ ಬಜೆಟ್ ಮಂಡಿಸಿದ ಸಂದರ್ಭದಲ್ಲಿ ನಾವುಗಳೆಲ್ಲರೂ ಮಾನ್ಯ ಮುಖ್ಯಮಂತ್ರಿಗಳಿಗೆ ಸಲಹೆಗಳನ್ನು ಕೊಟ್ಟಿದ್ದೇವೆ. ನಬಾರ್ಡ್ ಸಂಸ್ಥೆಯಿಂದ ಕಡಿಮೆ ಬಡ್ಡಿ ದರದಲ್ಲಿ 1,400 ಕೋಟಿ ರೂಪಾಯಿಗಳಷ್ಟು ಆಗದೇ ಹೋದರೂ ಎಷ್ಟು ಆಗುತ್ತದೋ ಅಷ್ಟು ಸಾಲ ತೆಗೆದುಕೊಂಡು ಅದನ್ನು ರೈತರಿಗೆ ವಿತರಣೆ

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಗಳನ್ನು ಪುರಸ್ಕರಿಸಿಲ್ಲವೆಂದು ಸೂಚಿಸುತ್ತದೆ.)

ಮಾಡಬೇಕೆಂದು ನಾವು ಸಲಹೆ ಕೊಟ್ಟಿದ್ದೆವು. ಇದರ ಬಗ್ಗೆ ರಾಜ್ಯ ಸರ್ಕಾರ ಏನು ಮಾಡಿದೆ ಎಂಬುದನ್ನು ದಯಮಾಡಿ ತಿಳಿಸಬೇಕು. ಇದೊಂದು ಭಾಗ. ಇನ್ನೊಂದು ಬಹಳ ಪ್ರಮುಖವಾದ ಅಂಶವೇನೆಂದರೆ, ಕೇಂದ್ರ ಸರ್ಕಾರದವರು ಮೂರು ರಾಜ್ಯಗಳಿಗೆ ಕೊಟ್ಟಿದ್ದಾರೆ. ಆದರೆ, ರಾಜ್ಯ ಸರ್ಕಾರದವರು ಏನು ಪ್ರಸ್ತಾವನೆ ಕಳುಹಿಸಿದ್ದಾರೆ. ಅದು ಬಹಳ ಪ್ರಮುಖವಾಗಿರುವ ವಿಷಯವಾಗಿದೆ. ಇವತ್ತು ರಾಜ್ಯ ಸರ್ಕಾರದವರು ಕರ್ನಾಟಕದಲ್ಲಿ ಕಬ್ಬು ಬೆಳೆಯುತ್ತಿರತಕ್ಕ ರೈತರು ಇಂಥ ತೊಂದರೆಯಲ್ಲಿದ್ದಾರೆ, ನಮಗೆ ದುಡ್ಡು ಬೇಕು, ನೀವು ರಿಸರ್ವ್ ಬ್ಯಾಂಕ್‌ನಿಂದ ಬಿಡುಗಡೆ ಮಾಡಿಸಿ, ನಬಾರ್ಡ್‌ನಿಂದ ಬಿಡುಗಡೆ ಮಡಿಸಿ ಅಥವಾ ಬೇರೆ ಸರ್ಕಾರದಿಂದ ಬಿಡುಗಡೆ ಮಾಡಿಸುತ್ತೇವೆ. ಎಂಬುದಕ್ಕೆ ಯಾವ ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ ಎನ್ನತಕ್ಕಂಥದ್ದು ನೀವು ಮಾಡಿ ಅದಕ್ಕೆ ನನ್ನದೇನೂ ತಕರಾರು ಇಲ್ಲಾ ನೀವು ಮಾಡಿರುವುದಕ್ಕೆ ಅಭಿನಂದಿಸುತ್ತೇನೆ. ಆತ್ಮಾನಂದರವರಿಗೆ ಅಭಿನಂದಿಸುತ್ತೇನೆ, ವಿರೋಧ ಪಕ್ಷ ಮತ್ತು ಆಡಳಿತ ಪಕ್ಷದ ಎಲ್ಲಾ ಕಬ್ಬು ಬೆಳೆಯತಕ್ಕಂಥ ರೈತರ ಪ್ರತಿನಿಧಿಯಾಗಿ ಆ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ, ಅದಕ್ಕೆ ತಮಗೆ ಧನ್ಯವಾದಗಳು, ಆ ಸಮಯವನ್ನು ಉಪಯೋಗಿಸಿಕೊಂಡು ನಾನು ಏನು ಕೇಳುತ್ತಿದ್ದೇನೆಂದರೆ, ರಾಜ್ಯ ಸರ್ಕಾರದವರು ಎರಡು ವರ್ಷಗಳಲ್ಲಿ ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ, ಕಬ್ಬು ಬೆಳೆಯತಕ್ಕಂಥ ರೈತರ ಪರವಾಗಿ ಕೇಂದ್ರ ಸರ್ಕಾರಕ್ಕೆ ಎಷ್ಟು ಪ್ರಸ್ತಾವನೆಗಳನ್ನು ಕಳುಹಿಸಿದ್ದೀರಾ? ಎಷ್ಟು ದುಡ್ಡನ್ನು ಕೇಳಿದ್ದೀರಿ ಎನ್ನತಕ್ಕದ್ದನ್ನು ದಯಮಾಡಿ ಈ ಸದನದ ಮುಂದೆ ಇಟ್ಟರೆ ಬಹಳ ಅನುಕೂಲವಾಗುತ್ತದೆ. ಆನಂತರ ನಾವೆಲ್ಲಾ ಹೋಗಿ ಕೇಂದ್ರ ಸರ್ಕಾರವನ್ನು ಮಾನ್ಯ ಜನಾರ್ಧನಪೂಜಾರಿಯವರು ಲೋಕಸಭೆಯ ಎದುರುಗಡೆ ಕುಳಿತಿದ್ದರು ಎಂದು ಕಾಣುತ್ತದೆ, ನಾವೂ ಸಹ ಕೇಂದ್ರ ಸರ್ಕಾರದ ವಿರುದ್ಧವಾಗಿ ಪ್ರತಿಭಟನೆ ಮಾಡುವುದಕ್ಕೆ ತಯಾರಿದ್ದೇವೆ ಎನ್ನತಕ್ಕದ್ದನ್ನು ತಮ್ಮ ಮಾತಿಗೆ ಧ್ವನಿಗೂಡಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

+ ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :– ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರ ಕಡೆಯಿಂದ ನಮ್ಮ ಕಬ್ಬು ಬೆಳೆಗಾರರು ಬಹಳ ತೊಂದರೆಯಲ್ಲಿದ್ದಾರೆ, ಅದರ ಬಗ್ಗೆ ಎರಡು ಮಾತಿಲ್ಲ, ಅದನ್ನು ಎಲ್ಲರೂ ಒಪ್ಪುವಂಥದ್ದು, ಆದರೆ ಅದರ ಬಗ್ಗೆ ರಾಜ್ಯ ಸರ್ಕಾರ ಕೊಟ್ಟಂಥ ಪರಿಹಾರ ಏನು? ಆನಂತರ ಕೇಂದ್ರ ಸರ್ಕಾರಕ್ಕೆ ಏನು ಪರಿಹಾರವನ್ನು ಕೇಳಿ ತಮ್ಮಿಂಥ ಪ್ರಪೋಸಲ್ ಹೋಗಿದೆ? ಇವತ್ತು ಕೇಂದ್ರ ಸರ್ಕಾರದಿಂದ ಮೂರು ರಾಜ್ಯಗಳಿಗೆ ಕೊಟ್ಟರು ಎಂದು ಹೇಳಿದರು, ಆದರೆ ಅಲ್ಲಿಂದ ಪ್ರಪೋಸಲ್‌ಗಳು ಹೋಗಿರುತ್ತದೆ, ಅಲ್ಲಿ ಏನೋ ಮಾತುಕತೆಯಾಗಿರುತ್ತದೆ, ಆ ರೀತಿ ನಮ್ಮ ರಾಜ್ಯ ಸರ್ಕಾರ ಯಾವ ರೀತಿ ಕೇಂದ್ರ ಸರ್ಕಾರಕ್ಕೆ ನಮ್ಮ ಕಬ್ಬು ಬೆಳೆಗಾರರ ಸಮಸ್ಯೆಗಳ ಬಗ್ಗೆ ಮಂಡನೆ ಮಾಡಿದೆ? ಅವರಿಗೇನು ಪರಿಹಾರವನ್ನು ಕೊಡಬೇಕೆಂದು ಕೇಳಿದೆ? ಏನು ಕನ್‌ವಿನ್ಸ್ ಮಾಡಿದ್ದಾರೆ ಎಂಬುದನ್ನು ಸ್ಪಷ್ಟೀಕರಣ ಮಾಡಿದರೆ ನಾವೂ ಪ್ರಯತ್ನ ಮಾಡಬಹುದು.

ಗೊಂದಲ

ಅಧ್ಯಕ್ಷರು :– ಮಾನ್ಯ ಮುದ್ದಹನುಮೇಗೌಡರೆ, ತಾವು ದಯಮಾಡಿ ಮುಗಿಸಿ, ಇಲ್ಲದಿದ್ದರೆ ಮಧ್ಯದಲ್ಲಿ ಎದ್ದೇಳುತ್ತಿರುತ್ತಾರೆ.

ಶ್ರೀ ಆರಗಜ್ಞಾನೇಂದ್ರ :– ಅದರ ಜೊತೆಗೆ....

ಶ್ರೀ ಎಸ್.ಪಿ. ಮುದ್ದಹನುಮೇಗೌಡ :– ತಾವು ಒಂದು ನಿಮಿಷ ಕುಳಿತುಕೊಳ್ಳಿ ಮಾತನಾಡುವಿರಂತೆ, ನನ್ನದಾದಮೇಲೆ ತಾವೇ ಮಾತನಾಡಿ, ಉತ್ತರವನ್ನು ಕೊಡುವಾಗ ನೀವೇ ಉತ್ತರ ಕೊಡುವಿರಂತೆ;

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಗಳನ್ನು ಪುರಸ್ಕರಿಸಿಲ್ಲವೆಂದು ಸೂಚಿಸುತ್ತದೆ.)

Speaker :- I don't want any intervention please. ನೀವು ಬೇಗ ಮುಗಿಸಿ, ಇಲ್ಲದಿದ್ದರೆ ಅವರು ಇನ್ನೂ ಬೇರೆಯದ್ದನ್ನು ಹೇಳಲು ಏಳುತ್ತಲೇ ಇರುತ್ತಾರೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :– ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ಹೇಳಿದಂತೆ, ರಾಜ್ಯ ಸರ್ಕಾರದ ಜವಾಬ್ದಾರಿಯೇ ಇಲ್ಲ ಎಂದು ಭಾಷಣ ಮಾಡಲು ನಾನು ನಿಂತಿಲ್ಲ, ಇವತ್ತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಕೂಡ ಜವಾಬ್ದಾರಿ ಇದೆ ಈ ರಾಜ್ಯದ ಕಬ್ಬು ಬೆಳೆಗಾರರ ನೆರವಿಗೆ ಬರತಕ್ಕದ್ದು ಎನ್ನುವಂಥ ಮಾತನ್ನು ನಾನು ಪ್ರಾರಂಭದಲ್ಲೇ ಹೇಳಿದ್ದೇನೆ, ಆದ್ದರಿಂದ ನನ್ನ ತಕರಾರು ಏನೆಂದರೆ ಕೇಂದ್ರ ಸರ್ಕಾರ ಯಾವ ಹಣದಿಂದ ಈ ಹಣವನ್ನು ಮೂರು ರಾಜ್ಯಗಳಿಗೆ ಬಿಡುಗಡೆ ಮಾಡಿದೆ?

ಅಧ್ಯಕ್ಷರು :– ರಾಜ್ಯ ಸರ್ಕಾರದವರು ಏನು ಮಾಡಿದ್ದಾರೆಂದು ಕೇಳಿ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :– ನಾವು ಅನಗತ್ಯವಾಗಿ ಏನಾದರು ಭಾಷಣ ಮಾಡುತ್ತಿದ್ದೇವೆಯೇ? ಇಷ್ಟೊಂದು ಪ್ರಮುಖವಾದ ವಿಚಾರದ ಬಗ್ಗೆ ಹೇಳಲು ಎರಡು ನಿಮಿಷ ಅವಕಾಶ ಕೊಡದಿದ್ದರೆ ಹೇಗೆ?

Mr. Speaker :- No. I am not obstructing you.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :– ಇವತ್ತು ಕೇಂದ್ರ ಸರ್ಕಾರ ಏನು ಸಕ್ಕರೆ ಅಭಿವೃದ್ಧಿ ನಿಧಿಯಿಂದ ಈ ಮೂರು ರಾಜ್ಯಗಳ ನೆರವಿಗೆ ಬರತಕ್ಕ ತೀರ್ಮಾನವನ್ನು ಕೈಗೊಂಡಿದೆ. ಈ ಸಕ್ಕರೆ ಅಭಿವೃದ್ಧಿ ನಿಧಿಗೆ ಈ ಮೂರೂ ರಾಜ್ಯಗಳ ಕಬ್ಬು ಬೆಳೆಗಾರರು ಮಾತ್ರ ವಂತಿಕೆಯನ್ನು ಕೊಟ್ಟಿಲ್ಲ. ಇಡೀ ರಾಷ್ಟ್ರದ ಮೂಲೆ ಮೂಲೆಯಲ್ಲಿ ಇಡೀ ರಾಷ್ಟ್ರದ ಗ್ರಾಮೀಣ ಭಾಗದಲ್ಲಿ ಬಡ ಕಬ್ಬು ಬೆಳೆಗಾರನ ಸಹಿತವಾಗಿ ತಾನು ಕೊಟ್ಟಿರತಕ್ಕಂಥ ಏನು ಕೊಡುಗೆ ಇದೆ ಈ ಸಕ್ಕರೆ ನಿಧಿಗೆ ಆ ಸಕ್ಕರೆ ಅಭಿವೃದ್ಧಿ ನಿಧಿಯಿಂದ ಈ ಮೂರು ರಾಜ್ಯಗಳಿಗೆ ಕೊಡಬೇಕೆಂದು ತೀರ್ಮಾನವನ್ನು ಮಾಡಿದ್ದಾರೆ. ಆದ್ದರಿಂದ ನನ್ನ ಮನವಿ ಏನೆಂದರೆ, ಇವತ್ತು ಕೇಂದ್ರ ಸರ್ಕಾರ ಏನು ರಾಷ್ಟ್ರದಲ್ಲಿರತಕ್ಕಂಥ ಕಬ್ಬು ಬೆಳೆಗಾರನ ಆತಂಕವನ್ನು ಅವನ ಸಂಕಷ್ಟವನ್ನು ಅರ್ಥಮಾಡಿಕೊಂಡು ಅವನ ನೆರವಿಗೆ ಬರಬೇಕೆಂದು ತೆಗೆದುಕೊಂಡಿದ್ದಾರೆ ಆ ತೀರ್ಮಾನವನ್ನು ಆ ನೆರವನ್ನು ಇವತ್ತು ರಾಷ್ಟ್ರದ ಎಲ್ಲಾ ಕಡೆಯೂ ಕಬ್ಬು ಬೆಳೆಯುತ್ತಿರುವ ಎಲ್ಲಾ ರೈತರಿಗೂ ಕೊಡಬೇಕು.

ಅಧ್ಯಕ್ಷರು :– ಮಾನ್ಯ ಆತ್ಮಾನಂದರವರೇ, ತಾವು ಮಾತನಾಡಿ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :– ಇದು ಅತ್ಯಂತ ಗಂಭೀರವಾದ ವಿಷಯ, ಇವತ್ತು ಈ ರಾಜ್ಯದಲ್ಲಿರತಕ್ಕಂಥ ಕಬ್ಬು ಬೆಳೆಗಾರರ ಬಗ್ಗೆ ಅಷ್ಟೊಂದು ಉತ್ಪ್ರೇಕ್ಷೆಯಿಂದ ಮುಗಿಸಲು ಆಗುವುದಿಲ್ಲ. ದಯಮಾಡಿ ಎರಡು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು :– ಕೊಟ್ಟಿದ್ದೇನಲ್ಲಾ, ನಿನ್ನೆ ಮಾತನಾಡಿದಿರಿ, ಇವತ್ತು ಮಾತನಾಡುತ್ತಿದ್ದೀರಿ.

Sri S.P. Muddahanume Gowda :- I am not talking anything unnecessarily. With all responsibility, I am making my statement here. ದಯಮಾಡಿ ಒಂದು ನಿಮಿಷ ಅವಕಾಶ ಕೊಡಿ. ಇವತ್ತು ಏನು ಈ ಸಕ್ಕರೆ ಅಭಿವೃದ್ಧಿ ನಿಧಿಯಿಂದ ಕೇಂದ್ರ ಸರ್ಕಾರದವರು ಕರ್ನಾಟಕದಲ್ಲಿರತಕ್ಕ ಕಬ್ಬು ಬೆಳೆಗಾರರ ನೆರವಿಗೂ ಬರಬೇಕು ಎನ್ನುವ ಮಾತನ್ನು ಹೇಳುತ್ತಾ, ಇದು ಒಂದು ವಾಣಿಜ್ಯ ಬೆಳೆ, ಒಂದು ವರ್ಷದಿಂದ ಹದಿನಾಲ್ಕು

ತಿಂಗಳುಗಳವರೆಗೆ ಆ ಕಬ್ಬನ್ನು ಹಾಕಿ ರೈತ ಕಾಯುತ್ತಾನೆ, ನಿರೀಕ್ಷೆ ಮಾಡುತ್ತಾನೆ, ಏನೋ ತನ್ನ ಜೀವನ ಸುಗಮವಾಗಬಹುದು ತನ್ನ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗಬಹುದು, ತನ್ನ ಕಷ್ಟದಿಂದ ಹೊರಕ್ಕೆ ಬರಬಹುದು ಎಂದು ನಿರಿಕ್ಷೆಯನ್ನಿಟ್ಟುಕೊಂಡು ಕಬ್ಬಿನ ಬೆಳೆಯನ್ನು ಬೆಳೆಯುತ್ತಿರುವ ರೈತರ ನೆರವಿಗೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರ ಎರಡೂ ಕೂಡ ಬರಬೇಕು, ಇವತ್ತು ಕೇಂದ್ರ ಸರ್ಕಾರ ಮಾಡಿರುವ XX ಬಗ್ಗೆ ರಾಜ್ಯ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು? ರಾಜ್ಯ ಸರ್ಕಾರ ಕರ್ನಾಟಕದ ರೈತ, ಕರ್ನಾಟಕದ ಕಬ್ಬು ಬೆಳೆಗಾರರಿಗೆ ಆರಿಗುವ ಅನ್ಯಾಯವನ್ನು ಸರಿಪಡಿಸಲು ರಾಜ್ಯ ಸರ್ಕಾರ ಯಾವ ತೀರ್ಮಾನವನ್ನು ಕೈಗೊಳ್ಳುತ್ತಾರೆ ಎನ್ನುವಂಥದ್ದು, ಮತ್ತು ಮತ್ತೊಮ್ಮೆ ಕೆಂದ್ರ ಸರ್ಕಾರ ಈ ರಾಜ್ಯದ ರೈತರ ನೆರವಿಗೆ ಬರಬೇಕು ಎಂದು.....

ಶ್ರೀ ಜಗದೀಶ್‌ಶೆಟ್ಟರ್ :– ಆ ಪದವನ್ನು ತೆಗೆದು ಹಾಕಬೇಕು.

ಅಧ್ಯಕ್ಷರು :– ಕೇಂದ್ರ ಸರ್ಕಾರವನ್ನು ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆಂದು ಹೇಳುತ್ತಿದ್ದಾರೆ.

ಶ್ರೀ ಜಗದೀಶ್‌ಶೆಟ್ಟರ್ :– ರೆಕಾರ್ಡ್ಸ್‌ನ್ನು ತೆಗೆಸಿ.

ಅಧ್ಯಕ್ಷರು :– ಕೇಂದ್ರ ಸರ್ಕಾರಕ್ಕೆ ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆಂದು ಹೇಳುತ್ತಿದ್ದಾರೆ.

ಗೊಂದಲ

ಅಧ್ಯಕ್ಷರು :– ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆಂದು ಹೇಳಿದ್ದಾರೆ.

ಶ್ರೀ ಜಗದೀಶ್‌ಶೆಟ್ಟರ್ :– ಇಲ್ಲಾ, ಆ ರೀತಿ ಹೇಳಲಿಲ್ಲ.

ಅಧ್ಯಕ್ಷರು :– ಅವರು ರಿಕ್ವೆಸ್ಟ್ ಮಾಡಿಕೊಳ್ಳಬಾರದೆ?

ಶ್ರೀ ಆರಗಜ್ಞಾನೇಂದ್ರ :– ಅದು ರೆಕಾರ್ಡ್‌ನಲ್ಲಿ ಆಗಿದೆ.

Mr. Speaker :- He is not criticizing.

ಗೊಂದಲ

ಅಧ್ಯಕ್ಷರು :– ರೆಕಾರ್ಡ್‌ನಲ್ಲಿ ಹಾಗೇನಾದರು ಇದ್ದರೆ ನಾನು ತೆಗೆಸಿಹಾಕಿಸುತ್ತೇನೆ. dont't worry, I will remove it. ತಾವು ದಯಮಾಡಿ ಮುಗಿಸಿ.

ಗೊಂದಲ

ಶ್ರೀ ಪಿ. ರಮೇಶ್ :– ಅಲ್ಲಿರುವ ಎಂ.ಪಿ. ಗಳೇನು ಮಾಡುತ್ತಾರೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :– ಆದ್ದರಿಂದ, ದಯಮಾಡಿ ಇವತ್ತು ಕೆಂದ್ರ ಸರ್ಕಾರ ಈ ತಾರತಮ್ಯ ನೀತಿಯನ್ನು ಕೈಬಿಟ್ಟು ಈ ರಾಜ್ಯದ ಕಬ್ಬುಬೆಳೆಗಾರರ ರಕ್ಷಣೆಗೆ.....

ಅಧ್ಯಕ್ಷರು :– ತಾವು ಮತ್ತೆ ಕೇಂದ್ರ ಸರ್ಕಾರವೆಂದು ಹೇಳುತ್ತೀರಲ್ಲಾ? ತಮ್ಮಂಥ ಬುದ್ದಿವಂತರೇ ಹೀಗೆ ಹೇಳಿದರೆ ಹೇಗೆ?

ಶ್ರೀ ಎಸ್.ಪಿ. ಮುದ್ದಹನುಮೇಗೌಡ :– ರಾಜ್ಯದ ಕಬ್ಬುಬೆಳೆಗಾರರ ರಕ್ಷಣೆಗೆ ಬರಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :– ಮಾನ್ಯ ಆತ್ಮಾನಂದರವರೇ, ಮಾತನಾಡಿ. You must avoid using the word 'Central Government'. ರಾಜ್ಯ ಸರ್ಕಾರ ಏನು ಮಾಡಿದೆ ಎಂದು ಹೇಳಿ.

ಮಾನ್ಯ ಸದಸ್ಯರು :– ಮಾನ್ಯ ಅಧ್ಯಕ್ಷರೇ, ನಾನೂ ಕೂಡ ಗಮನ ಸೆಳೆಯುವ ಸೂಚನೆಗೆ ತಮಗೆ ಪತ್ರವನ್ನು ಕೊಟ್ಟಿದ್ದೇನೆ.

(XX ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.)

ಶ್ರೀ ಪಿ.ಜಿ.ಆರ್. ಸಿಂಧ್ಯಾ :– ಮಾನ್ಯ ಅಧ್ಯಕ್ಷರೆ, ತಾವು ಈ ಸದನವನ್ನು ಹಿರಿಯಾರು ಅನುಭವವನ್ನು ಹೊಂದಿರತಕ್ಕವರು, ಅನುಭವವಿರತಕ್ಕಂಥ ಮಂತ್ರಿಗಳು ಇರುವಂಥ ಸಂದರ್ಭದಲ್ಲಿ ತಮಗೆ ಅನೇಕ ವಿಚಾರಗಳನ್ನು ಹೇಳತಕ್ಕ ಅವಶ್ಯಕತೆ ಇರುತ್ತದೆ. ತಾವೇನು ತೀರ್ಮಾನ ಕೊಡುತ್ತೀರಿ ಅದನ್ನೆಲ್ಲಾ ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಒಂದು ನಾವು ಗಮನದಲ್ಲಿ ಇಟ್ಟುಕೊಳ್ಳಬೇಕಾದ್ದು ತಮ್ಮ ಮಾಹಿತಿಗಾಗಿ ಕೊಡುತ್ತಿದ್ದೇನೇ, ಕೇಂದ್ರ ಸರ್ಕಾರದ ವಿರುದ್ಧ ರೆಫರೆನ್ಸ್‌ನ್ನೇ ಮಾಡಬಾರದು ಎಂದು ಹೇಳತಕ್ಕದ್ದು ತಪ್ಪಾಗುತ್ತದೆ.

ಅಧ್ಯಕ್ಷರು :– ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದಾರಲ್ಲಾ?

ಶ್ರೀ ಪಿ.ಜಿ.ಆರ್. ಸಿಂಧ್ಯಾ :– ನಾವು ದಯವಿಟ್ಟು ಕೇಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಗೋಪಾಲಗೌಡರು ಮಾತನಾಡಿದ್ದಕ್ಕೆ ಆಗಿನ ಅಧ್ಯಕ್ಷರು ಒಂದು ರೂಲಿಂಗ್‌ನ್ನು ಕೊಟ್ಟಿರುವ ಬಗ್ಗೆ ಅದನ್ನು ಈಗ ಸುರೇಶ್ ಕುಮಾರ್‌ರವರು ಓದಿದರು.....

ಶ್ರೀ ಪಿ.ಜಿ.ಆರ್. ಸಿಂಧ್ಯಾ :– ಗೋಪಾಲಗೌಡರಂಥ ನೈತಿಕತೆಯಲ್ಲಿ, ಪಾರ್ಲಿಮೆಂಟರಿ ಸ್ಕಿಲ್‌ನಲ್ಲಿ ಮತ್ತು ಆಗ ಇರತಕ್ಕದ್ದು ಇವತ್ತಿನ ಪರಿಸ್ಥಿತಿಯಲ್ಲಿ ಇಲ್ಲ. ಹಾಗೆಂದು ಅವರು ಹಾಕಿಕೊಂಡಿರುವಂಥ ವಿಚಾರಗಳನ್ನೆಲ್ಲಾ ಗಾಳಿಗೆ ತೂರಬೇಕೆಂದೂ ನಾನು ಹೇಳುವುದಿಲ್ಲ, ಆ ಸತ್ಸಂಪ್ರದಾಯವನ್ನೇ ಬೆಳೆಸಿಕೊಂಡು ಹೋಗಬೇಕು. ಆದರೆ ಇದೇ ಸದನದಲ್ಲಿ ಮಾನ್ಯ ವೀರೇಂದ್ರಪಾಟೀಲರು ಕಾಂಗ್ರೇಸ್ ನಿಂದ ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ರಾಮಕೃಷ್ಣಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಆವತ್ತಿನ ಪ್ರಧಾನಿಗಳನ್ನೂ ಸೇರಿಸಿ ಕೇಂದ್ರ ಸರ್ಕಾರವನ್ನು ಖಂಡನೆ ಮಾಡಿರುವ ಅನೇಕ ಸಂದರ್ಭಗಳು ಇದೆ, ಅವರಿಗೆ ದುಡ್ಡನ್ನು ಕೊಟ್ಟಿದ್ದೀರಿ; ನಮ್ಮ ರಾಜ್ಯ ಸರ್ಕಾರದ ಪ್ರಸ್ತಾವನೆ ಇದೆ, ನಮಗೇಕೆ ದುಡ್ಡನ್ನು ಕೊಟ್ಟಿಲ್ಲ ದಯವಿಟ್ಟು ಕೇಳಿ ಎನ್ನತಕ್ಕದ್ದೂ ತಪ್ಪು ಎಂದು ಹೇಳಿದರೆ ಹೇಗಾಗುತ್ತದೆ? ಆದ್ದರಿಂದ ದಯಮಾಡಿ x x x ನೋಡಿ ಇದಕ್ಕೆ ನಿಮಗೆ real concern ಎನ್ನತಕ್ಕದ್ದು ಇದ್ದರೆ, ಪಾಪ ಮುದ್ದಹನುಮೇಗೌಡರು, ರೈತಾಪಿ ಜನಾಂಗದಿಂದ ಗೆದ್ದ ಬಂದಿರತಕ್ಕವರು, ಆತ್ಮಾನಂದ, ಕರ್ನಾಟಕದ ಸಕ್ಕರೆಯ ಖಜಾನೆ ಎಂದರೆ ಮಂಡ್ಯ ಆದ್ದರಿಂದ ಅವರು ಮಾತನಾಡಲೇ ಬೇಕು, ಮಾತನಾಡುತ್ತಿದ್ದಾರೆ, Out of concern ನಾನು ಮುಖ್ಯಮಂತ್ರಿಯವರಿಗೆ, ಕೃಷಿ ಸಚಿವರಿಗೆ ಅಥವಾ ಕಬ್ಬಿನ ಸಚಿವರಿಗೆ ಏನು ಹೇಳಿದೆ ಎಂದರೆ, ನೀವೇ ಒಂದು ಪ್ರಸ್ತಾನೆಯನ್ನು ಮಂಡಿಸಿ, ಒಂದು ನಿರ್ಣಯವನ್ನು, ಕೇಂದ್ರ ಸರ್ಕಾರಕ್ಕೆ ಬೇಡಿಕೆ ಇಟ್ಟಿದ್ದಿದ್ದರೆ ಈ ಸರ್ಕಾರಕ್ಕೆ ಕಾಳಜಿ ಇದೆಯೆಂದು. ಹೇಳಬಹುದಾಗಿತ್ತು. ಅವರೂ ಸದಸ್ಯರಾಗಿ ನಾವು ಸದಸ್ಯರಾಗಿ ಈ ವಿಚಾರವನ್ನು ಪ್ರಸ್ತಾಪ ಮಾಡಿಯಷ್ಟೇ ತೃಪ್ತಿಪಟ್ಟುಕೊಳ್ಳಬೇಕೇ ಹೊರತು ರಾಜ್ಯ ಸರ್ಕಾರ ಮಾಡಿರತಕ್ಕದ್ದು ಏನು? ಇದು ಇರತಕ್ಕ ಪ್ರಶ್ನೆ ಆದ್ದರಿಂದ ಅನೇಕ ಸಂದರ್ಭದಲ್ಲಿ ತಾವು ಆ ಸ್ಥಾನದಲ್ಲಿ ಕುಳಿತು ರಾಜ್ಯಕ್ಕೆ ಆಗತಕ್ಕ ಅನ್ಯಾಯವನ್ನು ಕೋಲಾರಕ್ಕೆ ಅಥವಾ ಬೇರೆ ಕಡೆಗಾದ ಅನ್ಯಾಯದ ಬಗ್ಗೆ ತಾವು ಯಾವ ರೀತಿ ಎತ್ತಿ ಹಿಡಿಯಲು ಪ್ರಯತ್ನ ಮಾಡಿದ್ದೀರಿ ಕರ್ನಾಟಕದಲ್ಲೂ ತಾವು ಎತ್ತಿಹಿಡಿಯುವ ಕೆಲಸವನ್ನು ಮಾಡಿದ್ದೀರಿ ಇಲ್ಲೂ ಸಹ ಆ ಕೆಲಸವನ್ನು ಮಾಡಬೇಕು. ಕೇಂದ್ರ ಸರ್ಕಾರ ತಪ್ಪು ಮಾಡಿದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ, ಅವರು ಅದನ್ನು ಹೇಳಲಿ ಬಿಡಿ ರೆಫರೆನ್ಸ್ ಮಾಡಬಾರದು ಎಂದರೆ ಹೇಗೆ?

(xxx ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.)

ಅಧ್ಯಕ್ಷರು :– ರೆಫರೆನ್ಸ್ ಮಾಡಕೂಡದೆಂದು... ರಿಕ್ವೆಸ್ ಮಾಡಿಕೊಳ್ಳುತ್ತಿದ್ದಾರೆ, ಅದು ಸರಿಯಾಗಿದೆಯೆಂದು ಹೇಳುತ್ತಿದ್ದೇನೆ. ಮಾನ್ಯ ಆತ್ಮಾನಂದರವರೇ, ತಾವು ಪ್ರಾರಂಭ ಮಾಡಿ ಬರೀ ಆರ್ಗ್ಯುಮೆಂಟ್ಸ್ ಆಗಿಹೋಯಿತು.

ಶ್ರೀ ಕೆ.ಶ್ರೀನಿವಾಸಗೌಡ (ಕುಡುವನಹಳ್ಳಿ) :– ಮಾನ್ಯ ಮುದ್ದಹನುಮೇಗೌಡರು ಉತ್ತರಾಂಚಲ, ಕಾಂಗ್ರೆಸ್ ಸರ್ಕಾರದ್ದೂ ಅವರದ್ದನ್ನೂ ಸೇರಿಸಿಕೊಂಡು ಮಾತನಾಡಿದರು, ರೈತರ ವಿಷಯ ಬಂದಾಗ ಅವರು ಕೇಂದ್ರ ಸರ್ಕಾರವನ್ನು ಖಂಡನೆ ಮಾಡಲಿಲ್ಲ, ಅವರು ನೇರವಾಗಿ ಅವರದ್ದೇ ಪಕ್ಷ ಅಧಿಕಾರದಲ್ಲಿರುವ.....

ಅಧ್ಯಕ್ಷರು :– ಖಂಡನೆ ಮಾಡದೆ ರೆಫರ್ ಮಾಡಿದ್ದಾರೆ. ಕೇಂದ್ರ ಸರ್ಕಾರವನ್ನು ಖಂಡನೆ ಮಾಡದೆ ಮಾತನಾಡಿ.

ಶ್ರೀ ಕೆ.ಶ್ರೀನಿವಾಸಗೌಡ (ಕುಡುವನಹಳ್ಳಿ) :– ಅವರದ್ದೇ ಪಕ್ಷ ಅಧಿಕಾರದಲ್ಲಿರುವ ರಾಜ್ಯದ ಬಗ್ಗೆಯೂ ಮಾತನಾಡಿದ್ದಾರೆ, ಅದನ್ನೂ ಮಾತನಾಡುವುದು ಬೇಡ ಎಂದರೆ ಹೇಗೆ? ರೈತರ ವಿಚಾರ ಬಂದಾಗ ತಾವು ಹೀಗೆ ಮಾತನಾಡಿದರೆ ಹೇಗೆ?

ಗೊಂದಲ

Mr. Speaker :- Please. I have permitted Mr. Atmananda.

+ ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ) :– ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ರಾಜ್ಯದಲ್ಲಿರತಕ್ಕಂಥ ಕಬ್ಬು ಬೆಳೆಗಾರರ ಸಂಕಷ್ಟ ಪರಿಸ್ಥಿತಿಯನ್ನು ಮಾನ್ಯ ಮುದ್ದಹನುಮೇಗೌಡರು ಸಭೆಯ ಗಮನಕ್ಕೆ ತಂದಿದ್ದಾರೆ. ರಾಯದಲ್ಲಿ ಅಥವಾ ರಾಷ್ಟ್ರದಲ್ಲಿ ಸಕ್ಕರೆ ಉದ್ದಿಮೆ ಹಾಗೂ ಕಬ್ಬು ಬೆಳೆಗಾರರು ಸಂಕಷ್ಟ ಪರಿಸ್ಥಿತಿಯಲ್ಲಿ ಇರತಕ್ಕಂಥದ್ದು ಸರ್ವವಿಧಿತವಾದುದು. ಯಾವುದೇ ಸರ್ಕಾರವಿದ್ದರೂ ಕೂಡ, ಕೇಂದ್ರ ಸರ್ಕಾರಕ್ಕೆ ರಾಷ್ಟ್ರದ ಒಕ್ಕೂಟ ವ್ಯವಸ್ಥೆಯಲ್ಲಿ ಎಲ್ಲಾ ರಾಜ್ಯ ಸರಕಾರಗಳೂ ಕೂಡ ಸಮನಾಗಿ ಇರುತ್ತವೆ. ಈಗ ಅವರು ಉತ್ತರ ಪ್ರದೇಶ, ಉತ್ತರಾಂಚಲ ಮತ್ತು ಹರಿಯಾಣ ರೈತರಿಗೆ ಕೊಟ್ಟಿರತಕ್ಕಂಥದ್ದು, ಏನು ಶಾಸನ ಬದ್ದ ಬೆಲೆ ಮತ್ತು ರಾಜ್ಯಗಳ ಸಲಹಾ ಬೆಲೆ, ಇವೆರಡರ ಮಧ್ಯೆ ವ್ಯತ್ಯಾಸ ಇರತಕ್ಕಂಥ ಒಂದು ತೊಂದರೆಯಿಂದಾಗಲೀ ಅಥವಾ ವ್ಯತ್ಯಾಸದಿಂದ ರೈತರಿಗೆ ಕಾರ್ಖಾನೆಗಳು ಬಾಕಿ ಹಣವನ್ನು ಉಳಿಸಿಕೊಂಡಿದ್ದಾರೆ, ಆದ್ದರಿಂದ ರೈತರ ಬಾಕಿ ಹಣವನ್ನು ಕೊಡಲಿಕ್ಕೆ ಸಕ್ಕರೆ ಅಭಿವೃದ್ಧಿ ನಿಧಿಯಿಂದ ಕೊಟ್ಟರೆ ಅದು ಅನುಕೂಲವಾಗುತ್ತದೆ ಎಂದು ಸುಮಾರು 600 ಕೋಟಿ ರೂಪಾಯಿಗಳನ್ನು ಈ ಮೂರು ರಾಜ್ಯಗಳಿಗೆ ಬಿಡುಗಡೆ ಮಾಡಿದ್ದಾರೆ. ಅಂತೆಯೇ ನಮ್ಮ ರಾಜ್ಯದಲ್ಲೂ ಕೂಡ ಕಳೆದ 2002–03ನೇ ಸಾಲಿನಲ್ಲಿ ಸುಮಾರು 2000 ಕೋಟಿ ರೂಪಾಯಿಗಳ ಸಕ್ಕರೆ ಉತ್ಪಾದನೆಯಾಗಿದೆ. 18 ಲಕ್ಷ ಟನ್ ಸಕ್ಕರೆ ಇಲ್ಲಿ ಉತ್ಪಾದನೆಯಾಗಿದೆ. ಅದರಲ್ಲಿ ಕೇವಲ ಐದೂವರೆ ಲಕ್ಷ ಟನ್ ಮಾತ್ರ ಮಾರಾಟವಾಗಿದ್ದು. ಇನ್ನೂ ಹನ್ನೆರಡೂವರೆ ಲಕ್ಷ ಟನ್ ಸಕ್ಕರೆ ಬಾಕಿ ಉಳಿದಿದೆ. ನಾನೂ ಕೂಡ ಕಬ್ಬು ಬೆಳೆಯುವ ಪ್ರದೇಶದಿಂದ ಬಂದಿರತಕ್ಕಂಥವನು, ನಾನೂ ಕೂಡ ಒಬ್ಬ ಕಬ್ಬು ಬೆಳೆಗಾರನಾಗಿದ್ದೇನೆ. ನಾವು ಕಳೆದ ಸಾರಿ ಸಕ್ಕರೆ ಕಾರ್ಖಾನೆಗೆ ಸಾಗಿಸಿರತಕ್ಕಂಥ ಕಬ್ಬಿನ ಹಣವನ್ನೂ ಕೂಡ ನಮಗೆ ಪಾವತಿ ಮಾಡಿಲ್ಲ. ಮುಂದೆ ವ್ಯವಸಾಯ ಮಾಡುವುದಕ್ಕಾಗಲೀ ಅಥವಾ ಮುಂದಿನ ಬೆಳೆಯನ್ನು ಬೆಳೆಯುವುದಕ್ಕಾಗಲೀ ಆಗದಂತಹ ಸಂಕಷ್ಟ ಪರಿಸ್ಥಿತಿಯಲ್ಲಿ ರೈತನಿದ್ದಾನೆ. ಸನ್ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ 1400 ಕೋಟಿ ರೂಪಾಯಿಗಳ ಬಾಕಿ ರೈತರಿಗೆ ಬರಬೇಕಾಗಿದೆ.

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಗಳನ್ನು ಪುರಸ್ಕರಿಸಿಲ್ಲವೆಂದು ಸೂಚಿಸುತ್ತದೆ.)

ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರವೂ ಕೂಡ ಹೇಗೆ ಮೂರು ರಾಜ್ಯಗಳಿಗೆ ಕೇಂದ್ರ ಸರ್ಕಾರ ಹಣಕಾಸಿನ ಅನುಕೂಲವನ್ನು ಮಾಡಿಕೊಟ್ಟಿದೆಯೋ, ಆ ರೀತಿಯಲ್ಲಿ ಕೂಡ ನಮ್ಮ ರಾಜ್ಯ ಸರ್ಕಾರದ ಪ್ರಸ್ತಾವನೆಯನ್ನು ಕಳುಹಿಸಿ, ನಮ್ಮ ರಾಜ್ಯಕ್ಕೂ ಕೂಡ ಸಕ್ಕರೆ ಅಭಿವೃದ್ಧಿ ನಿಧಿಯಿಂದ ಹಣವನ್ನು ಪಡೆಯಲಿಕ್ಕೆ ಸರ್ವ ಪ್ರಯತ್ನವನ್ನು ಮಾಡಬೇಕು. ಕಷ್ಟದಲ್ಲಿ ಇರತಕ್ಕಂಥ ರೈತನ ಆಧಾರಕ್ಕೆ ಮತ್ತು ಆಸರೆಗೆ ನಮ್ಮ ಸರ್ಕಾರ ಬರಬೇಕು ಎನ್ನತಕ್ಕಂಥದ್ದನ್ನು ಕೇಳಿ, ಈ ದಿಸೆಯಲ್ಲಿ ನಮ್ಮ ಸರ್ಕಾರ ಮಾಡಿರತಕ್ಕಂಥ ಪ್ರಯತ್ನಗಳೇನು ಎಂಬುದನ್ನು ನಾನು ತಿಳಿಯಲಿಕ್ಕೆ ಬಯಸುತ್ತೇನೆ. ಸರ್ಕಾರ ಈ ದಿಸೆಯಲ್ಲಿ ತಮ್ಮ ಪ್ರಯತ್ನಗಳನ್ನೂ ಕೂಡ ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :- ಈಗ ಮಾನ್ಯ ತಮ್ಮಣ್ಣನವರು ಮಾತನಾಡಬೇಕು.

ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಗೌಡ :- ಮಾನ್ಯ ಅಧ್ಯಕ್ಷರೇ, ನನಗೆ ತಾವು ಮಾತನಾಡಲು ಅವಕಾಶ ಕೊಡುತ್ತಿಲ್ಲವಲ್ಲಾ?

ಅಧ್ಯಕ್ಷರು :- ಅವರು ನಿನ್ನೆ ಬರೆದು ಕೊಟ್ಟಿದ್ದಾರೆ. ಅದಕ್ಕೋಸ್ಕರ ಅವರ ಹೆಸರನ್ನು ಮೊದಲು ಕರೆದಿದ್ದೇನೆ. ನಂತರ ನಿಮಗೂ ಅವಕಾಶ ಮಾಡಿಕೊಡುತ್ತೇನೆ.

+ **ಶ್ರೀ ಡಿ.ಸಿ. ತಮ್ಮಣ್ಣ (ಕಿರುಗಾವಲು)** :- ಮಾನ್ಯ ಅಧ್ಯಕ್ಷರೇ, ರಾಜ್ಯದ ಕಬ್ಬು ಬೆಳೆಗಾರರು ಹಾಗೂ ರಾಜ್ಯದ ಸಕ್ಕರೆ ಕಾರ್ಖಾನೆಗಳು ರಾಜ್ಯ ಮತ್ತು ರಾಷ್ಟ್ರದ ಆರ್ಥಿಕ ಅಭಿವೃದ್ಧಿಗೆ ತಮ್ಮದೇ ಆದಂತಹ ಕೊಡುಗೆಯನ್ನು ಇಲ್ಲಿಯವರೆಗೆ ಕೊಟ್ಟಿದ್ದಾರೆ. ಕರ್ನಾಟಕ ರಾಜ್ಯದಲ್ಲಿ 42 ಸಕ್ಕರೆ ಕಾರ್ಖಾನೆಗಳಿವೆ. ಇವತ್ತಿನ ದಿವಸ ಎಲ್ಲಾ ಕಾರ್ಖಾನೆಗಳಲ್ಲೂ ಕೂಡ 1400 ಕೋಟಿ ರೂಪಾಯಿಗಳಿಗೂ ಅಧಿಕವಾದಂತಹ ಸಕ್ಕರೆ ದಾಸ್ತಾನು ಇದ್ದು, ಕರ್ನಾಟಕ ರಾಜ್ಯದಲ್ಲಿ ಅದರಲ್ಲೂ ಮುಖ್ಯವಾಗಿ 1000 ಕೋಟಿ ರೂಅಯಿಗಳಿಗೂ ಅಧಿಕವಾದಂತಹ ಹಣ ರೈತರಿಗೆ ಇವತ್ತಿನ ದಿವಸ ಬಾಕಿ ಇದೆ. ನಾನು ಮಂಡ್ಯ ಜಿಲ್ಲೆಯ ವಿಷಯದಲ್ಲಿ ಮತನಾಡುವುದಾದರೆ, ಮೂರು ಸಕ್ಕರೆ ಕಾರ್ಖಾನೆಗಳಿಂದ ಇವತ್ತಿನ ದಿವಸ ಮಂಡ್ಯ ಜಿಲ್ಲೆಯ ರೈತರಿಗೆ ಬರಬೇಕಾದಂತಹ ಬಾಕಿ ಹಣ 82 ಕೋಟಿ ರೂಪಾಯಿಗಳಾಗಿದೆ. ಅದೂ ಅಲ್ಲದೆ ಮಂಡ್ಯ ಜಿಲ್ಲೆಯಲ್ಲಿ ಕಬ್ಬು ಬೆಳೆಯುವುದಕ್ಕೋಸ್ಕರ ಸಹಕಾರಿ ಬ್ಯಾಂಕುಗಳ ಮೂಲಕ ಪಡೆದಂತಹ ಸಾಲ, ಮಂಡ್ಯ ಜಿಲ್ಲೆಯಲ್ಲಿ 48 ಕೋಟಿ ರೂಪಾಯಿಗಳು ಬಾಕಿ ಇದೆ. ಇವತ್ತಿನ ದಿವಸ ಮಂಡ್ಯ ಜಿಲ್ಲೆಯಲ್ಲಿ ಕಳೆದ ಮೂರು ವರ್ಷದಿಂದ ಬರದಿಂದ ತತ್ತರಿಸಿ, ರೈತರು ಕಳೆದ ವರ್ಷ ಬೆಳೆದಂತಹ ಕಬ್ಬಿನ ನಷ್ಟದ ಅಂದಾಜನ್ನು ತಾಂತ್ರಿಕ ತಜ್ಞರು ಮಡಿರುವಂತಹ ವರದಿ ಪ್ರಕಾರ 65 ಕೋಟಿ ರೂಪಾಯಿಗಳು ಕಳೆದ ವರ್ಷ ನಷ್ಟವಾಗಿದೆ ಎಂದು ತಾಂತ್ರಿಕ ತಜ್ಞರು ವರದಿ ಮಾಡಿದ್ದಾರೆ. ಇದೆಲ್ಲಾ ನಷ್ಟವನ್ನೂ ಕೂಡ ಪರಿಗಣಿಸಿದರೆ ಮಂಡ್ಯ ಜಿಲ್ಲೆಯಲ್ಲಿ ಕಳೆದ ವರ್ಷ ಸುಮಾರು 171 ಕೋಟಿ ರೂಪಾಯಿಗಳಷ್ಟು ನಷ್ಟ ಮಂಡ್ಯ ಜಿಲ್ಲೆಯ ರೈತರಿಗಾಗಿದೆ. ಇಂತಹ ಕಷ್ಟ ಪರಿಸ್ಥಿತಿಯಲ್ಲಿರುವಾಗ ನಮ್ಮ ಕೆಲವು ವಿರೋಧಿ ಸದಸ್ಯರೇನು ಹೇಳಿದರು. ಇದು ಕೇಂದ್ರ ಸರ್ಕಾರದ ಧರ್ಮದ ನಿಧಿ ಹಣವಲ್ಲ, ರಾಜ್ಯ ಸಕಾರಗಳಲ್ಲಿರುವಂತಹ ಸಕ್ಕರೆ ಕಂಪೆನಿಗಳಿಂದ ವಸೂಲು ಮಾಡಿದಂತಹ ಹಣ, ಕೇಂದ್ರ ಸಕ್ಕರೆ ನಿಧಿ ಏನಿದೆ, ಮತ್ತು ಕೆಂದ್ರ ಸರ್ಕಾರ ಅದಕ್ಕೆ ಕೂಡಿಸಿದಂತಹ ಹಣ 2700 ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರದಲ್ಲಿದೆ. ಎಲ್ಲಾ ರಾಜ್ಯಗಳಿಗೂ ಸೇರಿದಂತಹ ಹಣ ಈ 2700 ಕೋಟಿ ರೂಪಾಯಿಗಳಾಗಿದೆ. ಇದನ್ನು ಸಕ್ಕರೆ ಕಂಪೆನಿಗಳ ಅಭಿವೃದ್ಧಿಗೋಸ್ಕರ ಇಟ್ಟಂತಹ ನಿಧಿ ಅದು ಇದನ್ನು ರೈತರ ಪರಿಹಾರಕ್ಕೋಸ್ಕರ ಇಟ್ಟಂತಹ ಹಣವಲ್ಲ. ಆದರೆ ರಾಜ್ಯದಲ್ಲಿ

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಗಳನ್ನು ಪುರಸ್ಕರಿಸಿಲ್ಲವೆಂದು ಸೂಚಿಸುತ್ತದೆ.)

ಮತ್ತು ರಾಷ್ಟ್ರಗಳಲ್ಲಿ ಇರುವಂತಹ ಸಕ್ಕರೆ ಕಂಪೆನಿಗಳ ಪರಿಸ್ಥಿತಿಯನ್ನು ಪರಿಶೀಲಿಸಿ ಹಗೂ ಕಬ್ಬು ಬೆಳೆಗಾರರ ಕಷ್ಟ ಪರಿಸ್ಥಿತಿಯನ್ನು ಪರಿಸೀಲಿಸಿ, ಕೆಂದ್ರ ಸಕಾರ ಮೂರು ರಾಜ್ಯಗಳ ರೈತರ ನೆರವಿಗೆ ಬರುವುದಕ್ಕೋಸ್ಕರ ಅವರಿಗೆ ಉಳಿದಂತಹ ಬಾಕಿ ಹಣವನ್ನು ಕೊಡುವುದಕ್ಕೋಸ್ಕರ, 603 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ. ಬಿಡುಗಡೆ ಮಾಡುವಾಗ ಎಲ್ಲಾ ರಾಜ್ಯಗಳ ಸಕ್ಕರೆ ಕಂಪೆನಿಯನ್ನೂ ಕೂಡ ಒಂದೇ ಸಮನಾಗಿ ತುಲನಾತ್ಮಕವಾಗಿ ನೋಡಿ ಕೆಂದ್ರ ಸರ್ಕಾರ ಒಂದು ನೀತಿಯನ್ನು ತೆಗೆದುಕೊಳ್ಳಬೇಕಾಗಿತ್ತು. ಆದರೆ ಕೇಂದ್ರ ಸರ್ಕಾರ ಆ ನೀತಿಯನ್ನು ಅನುಸರಿಸಿಲ್ಲ. ಅದರ ಬಗ್ಗೆ ನಾವು ಕೇಂದ್ರ ಸರ್ಕಾರವನ್ನು ಖಂಡನೆ ಮಾಡುವುದಕ್ಕೆ ಈ ದಿವಸ ನಾವು ಇಲ್ಲಿ ನಿಂತಿಲ್ಲ. ನಮಗೆ ಆಗಿರುವಂತಹ ಅನ್ಯಾಯವನ್ನು ರಾಜ್ಯ ಸರ್ಕಾರಕ್ಕೆ ಆಗಿರುವಂತಹ ಅನ್ಯಾಯವನ್ನು ಸರಿಪಡಿಸುವುದಕ್ಕೋಸ್ಕರ ಈ ಸದನದ ಮೂಲಕ ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ತರಬೆಕು. ಈ ರಾಜ್ಯ ಸರ್ಕಾರ ಎಂದು ಮನವಿಯನ್ನು ಮಾಡಿಕೊಳ್ಳುವುದಕ್ಕೋಸ್ಕರ ಇವತ್ತಿನ ದಿವಸ ನಾವು ಮಾತನಾಡುತ್ತಿದ್ದೇವೆ. ಈ ರಾಜ್ಯದ ರೈತರಿಗೆ ಆಗಿರುವ ಕಬ್ಬು ಬೆಳೆಗಾರರಿಗೆ ಆಗಿರುವ ಅನ್ಯಾಯವನ್ನು ಈ ಸದನದ ಮೂಲಕ ಕೇಂದ್ರದ ಗಮನಕ್ಕೆ ತರಬೇಕು. ಈಗಾಗಲೇ ಮಹಾರಾಷ್ಟ್ರ ಸರ್ಕಾರ ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪ್ರತಿಭಟನೆಯನ್ನೂ ಕೂಡ ಸಲ್ಲಿಸಿದೆ. ಅದು ತನ್ನ ಅನಿಸಿಕೆಯನ್ನು ಸದನದ ಮೂಲಕ ತಿಳಿಸಿದೆ. ಆದ್ದರಿಂದ ಈ ಸದನದ ಮೂಲಕ ರಾಜ್ಯದ ಕಬ್ಬು ಬೆಳೆಗಾರರಿಗೆ ಆಗಿರುವಂತಹ ಅನ್ಯಾಯವನ್ನು ತಾವು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಬೇಕೆಂದು ತಮ್ಮನ್ನು ಪ್ರಾರ್ಥನೆ ಮಾಡಿ, ರಾಜ್ಯ ಸರ್ಕಾರ ಇದನ್ನು ಮಾಡಬೇಕೆಂದು ತಿಳಿಸುತ್ತಾ ಹಾಗೂ ನಮ್ಮ ವಿರೋಧಿ ಪಕ್ಷದ ಸದಸ್ಯರೂ ಕೂಡ, ಬಿ.ಜೆ.ಪಿಯನ್ನು ಪ್ರತಿನಿಧಿಸುವಂತಹವರು ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತಂದು ಈ ರಾಜ್ಯದ ರೈತರ ನೆರವಿಗೆ ಬರಬೇಕು. ಅವರೂ ಕೂಡ ನಮ್ಮ ಜೊತೆಯಲ್ಲಿ ಧ್ವನಿಗೂಡಿಸಬೇಕು ಎಂದು ಅವರಲ್ಲೂ ಕೂಡ ನಾನು ಪ್ರಾರ್ಥನೆಯನ್ನು ಮಾಡುತ್ತೇನೆ.

ಅಧ್ಯಕ್ಷರು :– ಈಗ ಮಾನ್ಯ ಶಿವಾನಂದ ಪಾಟೀಲ್‌ರವರು ಮಾತನಾಡಿ.

ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಗೌಡ (ತಿಕೋಟಾ) :– ಮಾನ್ಯ ಅಧ್ಯಕ್ಷರೇ, ಮಾನ್ಯ ಮುದ್ದಹನುಮೇಗೌಡರು ಪ್ರಸ್ತಾಪ ಮಡಿರುವ ವಿಷಯ ಇಡೀ ರಾಜ್ಯಕ್ಕೇ ವ್ಯಾಪಿಸಿರತಕ್ಕಂತ ಒಂದು ಸಮಸ್ಯೆ ಎಂದು ನಾನು ಭಾವಿಸುತ್ತೇನೆ. ಈ ದಿಸೆಯಲ್ಲಿ ಕೇಂದ್ರ ಅಥವಾ ರಾಜ್ಯವನ್ನು ದೂಷಿಸುವುದಕ್ಕೆ ನಾನು ಹೋಗುವುದಿಲ್ಲ. ಆದರೆ ನನಗೆ ಬಂದ ವರ್ತಮಾನದ ಪ್ರಕಾರ ಮಾನ್ಯ ಮುಖ್ಯಮಂತ್ರಿಗಳು ಮಂಡ್ಯ ಜಿಲ್ಲೆಗೆ ಮಾತ್ರ ಕಬ್ಬು ಬೆಳೆಗಾರರಿಗೆ ಆದಂತಹ ಹಾನಿಯನ್ನು ಅವಲೋಕನ ಮಾಡಿ ಒಂದು ವರದಿಯನ್ನು ಒಪ್ಪಿಸಿರಿ ಎಂದು ರೆವಿನ್ಯೂ ಕಮಿಷನರ್ ಅಧ್ಯಕ್ಷತೆಯಲ್ಲಿ ಕಮಿಟಿಯೊಂದನ್ನು ಮಾಡಿದ್ದರೆ ಎಂದು ನನಗೆ ತಿಳಿದು ಬಂದಿದೆ. ಅದನ್ನು.....

ಶ್ರೀ ಎಂ. ಮಹದೇವ್ :– ಮಾನ್ಯ ಮುಖ್ಯಮಂತ್ರಿಗಳು ಇಡೀ ರಾಜ್ಯದ ಪರಿಸ್ಥಿತಿಯನ್ನು ಅವಲೋಕನ ಮಾಡಿ ವರದಿಯನ್ನು ಕೊಡಿ ಎಂದು ಹೇಳಿದ್ದಾರೆ ಸ್ಪೆಸಿಫಿಕ್ಕಾಗಿ ಮಂಡ್ಯ ಜಿಲ್ಲೆಗೆ ಸಂಬಂಧಪಟ್ಟಂತೆ ಮಾತ್ರ ವರದಿ ಕೊಡಿ ಎಂದು ಅವರೇನೂ ಹೇಳಿಲ್ಲ. ಎಲ್ಲೆಲ್ಲಿ ಬರಗಾಲದ ಪರಿಸ್ಥಿತಿಯಲ್ಲಿ ತೊಂದರೆ ಆಗಿದೆಯೋ ಅಲ್ಲಿ.....

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ :– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಬಳಿ ಏನು ಮಾಹಿತಿ ಇದೆಯೋ ಅದನ್ನು ಅವರು ಪೂರ್ಣವಾಗಿ ಹೇಳಲು ಅವಕಾಶ ಮಾಡಿಕೊಡಿ ನಂತರ ಬೇಕಾದರೆ ಮಾನ್ಯ ಮಂತ್ರಿಗಳು ಅದರ ಬಗ್ಗೆ ಉತ್ತರ ಹೇಳಲಿ.

ಗೊಂದಲ

ಅಧ್ಯಕ್ಷರು :– ಮಾನ್ಯ ಮಂತ್ರಿಗಳು ಮಾನ್ಯ ಸದಸ್ಯರು ಹೇಳಿದ ಮೇಲೆಯೇ ಉತ್ತರ ಕೊಡಿ.

ಶ್ರೀ ಎಂ. ಮಹದೇವ್ :– ಮಾನ್ಯ ಅಧ್ಯಕ್ಷೇ, ಮಂಡ್ಯ ಜಿಲ್ಲೆಗೆ ಸಂಬಂಧಪಟ್ಟಂತೆ ಮತ್ರ ವರದಿ ಕೊಡಿ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆಂದು ಮಾನ್ಯ ಸದಸ್ಯರು ಹೇಳಿದರು. ಅದ್ದರಿಂದಾಗಿ ನಾನು ಮಧ್ಯೆ ಪ್ರವೇಶಿಸಬೇಕಾಯಿತು. ಮಾನ್ಯ ಮುಖ್ಯಮಂತ್ರಿಗಳು ಇಡೀ ರಾಜ್ಯದ....

ಅಧ್ಯಕ್ಷರು :– ಮಾನ್ಯ ಮಹದೇವ್‌ರವರೇ, ಮಾನ್ಯ ಸದಸ್ಯರು ಮಾತುಗಳು ಪೂರ್ಣವಾದ ನಂತರವೇ ತಮ್ಮ ಉತ್ತರವನ್ನು ಕೊಡಿ.

ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಗೌಡ :– ಮಾನ್ಯ ಅಧ್ಯಕ್ಷರೇ, ನಾನು ಯೀಲ್ಡ್ ಆಗಿದ್ದರೆ ಮಾನ್ಯ ಮಂತ್ರಿಗಳು ಉತ್ತರ ಕೊಡಬಹುದಾಗಿತ್ತು ಆದರೆ ನಾನು ಯೀಲ್ಡ್ ಆಗಿಲ್ಲ.

ಶ್ರೀ ಕರಿಯಣ್ಣ :– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ತಪ್ಪು ಮಾಹಿತಿ ಹೇಳುತ್ತಿರಬೇದಾದರೆ ಮಾನ್ಯ ಮಂತ್ರಿಗಳು ಅಲ್ಲದೆ ಅದರ ಬಗ್ಗೆ ಇನ್ಯಾರು ಕ್ಲಾರಿಫಿಕೇಷನ್ ಅನ್ನು ಕೊಡಬೇಕು?

ಅಧ್ಯಕ್ಷರು :– ನಾನು ಮಾನ್ಯ ಮಂತ್ರಿಗಳು ಉತ್ತರ ನೀಡಲು ನಂತರ ಅವಕಾಶ ಕೊಡುತ್ತೇನೆ. ಆಗ ಅವರು ಕ್ಲಾರಿಫಿಕೇಷನ್ ಮಾಡುತ್ತಾರೆ ಬಿಡಿ.

ಶ್ರೀ ಕರಿಯಣ್ಣ :– ಮಾನ್ಯ ಮಂತ್ರಿಗಳು ಈ ಹಂತದಲ್ಲಿ ಕ್ಲಾರಿಫಿಕೇಷನ್ ಮಾಡದಿದ್ದರೆ ಮಾನ್ಯ ಸದಸ್ಯರು ಹೇಳಿದಂತಹ ಸತ್ಯಕ್ಕೆ ದೂರವಾದ ಮಾಹಿತಿಗಳು ಕಡತಕ್ಕೆ ಹೋಗುತ್ತವೆ.

ಅಧ್ಯಕ್ಷರು :– ಮಾನ್ಯ ಸದಸ್ಯರ ಮಾತು ಮುಗಿಸಿದ ನಂತರ ಮಾನ್ಯ ಮಂತ್ರಿಗಳು ಉತ್ತರ ಹೇಳಲಿ ಎಂದು ನಾನು ಹೇಳುತ್ತಿದ್ದೇನಲ್ಲಾ?

ಶ್ರೀ ಶಿವಾನಂದ ಪಾಟೀಲ್ ಸಿದ್ರಾಮಗೌಡ :– ನಾನು ಯೀಲ್ಡ್ ಆಗಿದ್ದರೆ ಮಾನ್ಯ ಮಂತ್ರಿಗಳು ಉತ್ತರ ಹೇಳಬಹುದಾಗಿತ್ತು.

ಶ್ರೀ ಕರಿಯಣ್ಣ :– ಏಕಾಏಕಿಯಾಗಿ ಈ ವಿಸಯ ಈಗ ಪ್ರಸ್ತಾಪವಾಗಿದೆ. ಈ ಹಂತದಲ್ಲೇ ಮಾನ್ಯ ಮಂತ್ರಿಗಳು ಅದರ ಬಗ್ಗೆ ಕ್ಲಾರಿಫಿಕೇಷನ್ ಮಾಡಬೇಕಾಗುತ್ತದೆ.

ಅಧ್ಯಕ್ಷರು :– ಮಾನ್ಯ ಸದಸ್ಯರು ಮಾತನಾಡುವಾಗ ಮಧ್ಯೆ ಮಧ್ಯೆಯೇ ಕ್ಲಾರಿಫಿಕೇಷನ್ ಕೊಡುವುದು ಬೇಡ.

ಶ್ರೀ ಕರಿಯಣ್ಣ :– ಹಾಗಾದರೆ ಮಾನ್ಯ ಸದಸ್ಯರು ಹೆಳಿದ್ದೆಲ್ಲಾ ಸತ್ಯವೆಂದು ನಾವು ಒಪ್ಪಿಕೊಂಡು ಬಿಡಬೇಕೇ?

ಅಧ್ಯಕ್ಷರು :– ನಾನು ಅವಕಾಶ ಕೊಟ್ಟಾಗ ಮಾನ್ಯ ಮಂತ್ರಿಗಳು ಅದರ ಬಗ್ಗೆ ಸರಿಯಾದಂತಹ ಉತ್ತರವನ್ನು ಹೇಳಲಿ.

ಕರಿಯಣ್ಣ :– ಅವರು ಹೇಳಿದ್ದನ್ನೆಲ್ಲಾ ನಾವು ಒಪ್ಪಿಕೊಳ್ಳುತ್ತೇವೆ ಎಂದು ಭಾವಿಸಿ ಉದ್ದೇಶ ಪೂರ್ವಕವಾಗಿಯೇ ಅವರು ಸತ್ಯಕ್ಕೆ ದೂರವಾಗಿ ಹೇಳಲಿಕ್ಕೆ ಹೊರಟಿದ್ದಾರೆ.

ಅಧ್ಯಕ್ಷರು :– ಮಾನ್ಯ ಕರಿಯಣ್ಣನವರೇ, Can you not wait for one minute.

ಶ್ರೀ ಶಿವಾನಂದ ಪಾಟೀಲ್ ಸಿದ್ರಾಮಗೌಡ :– ಮಾನ್ಯ ಕರಿಯಣ್ಣನವರೇ ನಾನು ಸತ್ಯಕ್ಕೆ ದೂರವಾದದ್ದು ಹೇಳಿದ್ದರೆ ಅದನ್ನು ವಾಪಸ್ ತೆಗೆದುಕೊಳ್ಳುತ್ತೇನೆ.

ಗೊಂದಲ

ಅಧ್ಯಕ್ಷರು :- ನಾನು ಮಾನ್ಯ ಮಂತ್ರಿಗಳು ಉತ್ತರವನ್ನೇ ಕೊಡುವುದು ಬೇಡವೆಂದು ಹೇಳುತ್ತಿಲ್ಲ. ಮಾನ್ಯ ಸದಸ್ಯರ ಮಾತು ಮುಗಿಸಿದ ನಂತರ ಉತ್ತರ ಕೊಡಲಿ ಎಂದು ಮಾತ್ರ ಹೇಳುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರೊಬ್ಬರು ವಿಷಯವೊಂದನ್ನು ಪ್ರಸ್ತಾಪ ಮಾಡುವಂತಹ ಸಂದರ್ಭದಲ್ಲಿ ಆ ರೀತಿ ಹೇಳುವುದು ಸರಿಯಲ್ಲ.

ಅಧ್ಯಕ್ಷರು :- ಮಾನ್ಯ ಸದಸ್ಯರ ಮುಗಿದ ಮೇಲೆ ಮಾನ್ಯ ಮಂತ್ರಿಗಳು ಉತ್ತರ ಕೊಡಲಿ. I have no objection.

ಗೊಂದಲ

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೇ, ತಾವು ಈ ವಿಷಯದ discussion ಗೆ allow ಮಾಡಿದ್ದೀರಾ?

ಗೊಂದಲ

ಅಧ್ಯಕ್ಷರು :- ಇದು ಬಹಳ ಮುಖ್ಯವಾದ ಸಬ್ಜೆಕ್ಟ್ ಆಗಿದೆ. ಅನೇಕ ವೇಳೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡತಕ್ಕಂಥ ವಿಷಯದಲ್ಲಿ It is not the question of discussion.

ಗೊಂದಲ

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೇ, ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸತಕ್ಕಂಥ ವಿಚಾರಗಳನ್ನು ತಾವು ಅನೇಕ ಸಲ ಪರಿವರ್ತನೆ ಮಾಡಿ ಕೊಟ್ಟಿದ್ದೀರಿ. ಇಲ್ಲಿ ಏನಾಗುತ್ತದೆ ಎಂದರೆ, ಇಂತಹ ಪ್ರಾಮುಖ್ಯವಾದಂತಹ ವಿಚಾರವನ್ನು ಶೂನ್ಯ ವೇಳೆಯಲ್ಲಿ ಯಾರೋ ಎತ್ತಿದರೆ, ಅದನ್ನು ಪರಿವರ್ತನೆ ಮಾಡಿ ಚರ್ಚೆಗಾದರೂ ಅವಕಾಶ ಮಾಡಿಕೊಟ್ಟರೆ ಸರ್ಕಾರ ಅಕದಕರ ಸರಿಯಾದಂತಹ ರೀತಿಯಲ್ಲಿ ಉತ್ತರ ಹೇಳುವುದಕ್ಕಾದರೂ ಅವಕಾಶವಾಗುತ್ತದೆ. ಇಲ್ಲಿ ಉತ್ತರವನ್ನೂ ಸಹ ಹೇಳುವ ಹಾಗಿಲ್ಲ. ಆದರೆ ಎಲ್ಲಾ ಸದಸ್ಯರೂ ಕೂಡ ಇದರ ಬಗ್ಗೆ ಚರ್ಚೆ ಮಾಡುತ್ತಾರೆ.

ಅಧ್ಯಕ್ಷರು :- ಈ ವಿಷಯದ ಬಗ್ಗೆ ನಾಳೆ ಅಥವಾ ನಾಡಿದ್ದು ನಾನು ಸ್ಟೇಟ್‌ಮೆಂಟ್ ಮಾಡುತ್ತೇನೆ ಎಂದು ಮಾನ್ಯ ಮಂತ್ರಿಗಳು ಮಹದೇವ್‌ರವರು ನನಗೆ ಹೇಳಿ ಕಳುಹಿಸಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ :- ಅದನ್ನು ಯಾವ ರೂಪದಲ್ಲಿ ಮಾಡುತ್ತಾರೆ?

Mr. Speaker :- Undre residuary powers of the chair ನನಗೆ ನಿಯಮ 361ರಲ್ಲಿ residuary powers ಇದೆ ತಾನೇ? ಇದು ಬಹಳ ಮುಖ್ಯವಾದ ವಿಷಯ. ಅವರು ಉತ್ತರವನ್ನು ಹೇಳುತ್ತೇವೆ. ಎನ್ನುವುದಾದರೆ ಉತ್ತರವನ್ನು ಹೇಳಲಿ. ಅದಕ್ಕೆ ನನ್ನದೇನೂ ಅಭ್ಯಂತರ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೇ, ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ ವಿಷಯದ ಬಗ್ಗೆ ಎಲ್ಲರೂ ಮಾತನಡಿದರೆ ವಿವರವಾದ ಉತ್ತರವನ್ನು ಹೇಗೆ ಕೊಡುವುದಕ್ಕಾಗುತ್ತದೆ.

ಅಧ್ಯಕ್ಷರು :- ಮಾನ್ಯ ಚಂದ್ರೇಗೌಡರೇ, ಅನೇಕ ಸಲ ನಾವು ಇಲ್ಲಿ ಅಲೋ ಮಾಡಿದ್ದೇವೆ. ಇದು. ಬಹಳ ಮುಖ್ಯವಾದ ವಿಷಯ. ನಾವು ಇಲ್ಲಿ ಅಲೋ ಮಾಡಿರುವ ಬಗ್ಗೆ ನಿಮಗೆ ಎಷ್ಟು examples ಗಳನ್ನು ಬೇಕಾದರೂ ಸಹ ನಾನು ಕೊಡುತ್ತೇನೆ. ಅವರು ಉತ್ತರ ಕೊಡುವುದಿಲ್ಲ

ಎಂದರೆ ಬೇರೆ ವಿಷಯ. ಅವರು ಉತ್ತರ ಕೊಡುತ್ತೆನೆ. ಎಂದು ಹೇಳಿದ ಮೇಲೆ I have no objection.

ಶ್ರೀ ಡಿ. ಬಿ. ಚಂದ್ರೇಗೌಡ :– ಆಗಬಹುದು ಸ್ವಾಮಿ.....

ಅಧ್ಯಕ್ಷರು :– ಮಾನ್ಯ ಚಂದ್ರೇಗೌಡರೇ, ಇದು ಬಹಳ ಮುಖ್ಯವಾದ ವಿಷಯ. ದಯವಿಟ್ಟು ಕ್ರಮಿಸಬೇಕು.

ಶ್ರೀ ಜಗದೀಶ್ ಶೆಟ್ಟರ್ :– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮಾತನಾಡಲು ತಾವು ಪರ್ಮಿಷನ್ ಕೊಟ್ಟಿದ್ದೀರಿ. ಮಾನ್ಯ ಮಹದೇವ್‌ರವರೂ ಸಹ ನಾನು ಉತ್ತರ ಕೊಡುತ್ತೇನೆ ಎಂದು ಹೇಳುತ್ತಿದ್ದಾರೆ.

ಗೊಂದಲ

ಅಧ್ಯಕ್ಷರು :– ಮಾನ್ಯ ಶಿವಾನಂದ ಪಾಟೀಲ್‌ರವರೇ, ತಾವು ದಯವಿಟ್ಟು ಮಾತನಾಡುವುದನ್ನು ಮುಂದುವರೆಸಿ ಬೇಗ ಮುಗಿಸಿ.

ಶ್ರೀ ಶಿವಾನಂದ ಪಾಟೀಲ್ ಸಿದ್ರಾಮಗೌಡ :– ಮಾನ್ಯ ಅಧ್ಯಕ್ಷರೇ, ನನಗೆ ಮಾತನಾಡುವುದಕ್ಕೇ ಬಿಡುತ್ತಿಲ್ಲ.

4.50 ಪಿ.ಎಂ.

ಗೊಂದಲ

ಶ್ರೀ ಎಸ್.ಎಸ್. ಪಾಟೀಲ್ :– ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು ಇದಕ್ಕೆ ಅಬ್ಜೆಕ್ಷನ್ ಮಾಡಿದರು. ಕಡತ ತೆಗೆದು ನೋಡಿ ಇದೇ ಶೂನ್ಯ ವೇಳೆಯಲ್ಲಿ ದೇವೇಗೌಡರ ಬಗ್ಗೆ ಹಾಗೂ ದೇವೇಗೌಡರ ಮಕ್ಕಳ ಬಗ್ಗೆ ಒಂದೂವರೆ ಗಂಟೆ ಟೀಕೆ ನಡೆದಿದೆ. ನಾವು ಕೂತು ಕೇಳಿದ್ದೆವು. ಮೂರು ಅಷೆಂಬ್ಲಿಯಲ್ಲಿಯೂ ನಡೆದಿದೆ. ಆಗ ಯಾರೂ ಅಬ್ಜೆಕ್ಷನ್ ಮಾಡಲಿಲ್ಲ. ದಯವಿಟ್ಟು ಕಡತ ತೆಗೆದು ನೋಡಿ ನಿಮ್ಮ ಉತ್ತರಹೇಳಿ. ಇದೇ ಶೂನ್ಯ ವೇಳೆಯಲ್ಲಿ ಒಂದೂವರೆ ಗಂಟೆ ಇದೇ ಅಸೆಬ್ಲಿಯಲ್ಲಿ ಚರ್ಚೆ ನಡೆದಿದೆ.

ಶ್ರೀ ಡಿ.ಬಿ. ಚಂದ್ರೇಗೌಡ :– ತಲೆ ತುಂಬಾ ಕಡತಗಳೇ ಇವೆ. ತಾವು ಹಿರಿಯ ಸದಸ್ಯರಿದ್ದೀರಿ, ನನ್ನ ಅಬ್ಜೆಕ್ಷನ್ ಏನೆಂದರೆ, ಶೂನ್ಯ ವೇಳೆಯಲ್ಲಿ ಎತ್ತಿದ ಪ್ರಶ್ನೆಗಳಿಗೆ ಸರ್ಕಾರ ಉತ್ತರ ಕೊಡಬೇಕಾದ ಪ್ರಮೇಯ ಇಲ್ಲ. ಆದರೂ ಅಧ್ಯಕ್ಷರು ಅಪ್ಪಣೆ ಕೊಡುತ್ತಾರೆ. ಎನ್ನುವ ಕಾರಣಕ್ಕಾಗಿ ನಾವು ಉತ್ತರ ಒದಗಿಸುತ್ತೇವೆ. ನಾನು ಹೇಳುವುದು ಅನ್ಯಥಾ ಭಾವಿಸಿಬೇಡಿ ಸದನದ ಕಡತಕ್ಕೆ ಹೋಗುವುದು ಬೇಡ. ಒಂದು ಪ್ರಾಮುಖ್ಯವಾದ ವಿಚಾರವನ್ನು ನಮ್ಮ ನಿಯಮಗಳಲ್ಲಿ ಎನಿದೆ ಅದರ ಪ್ರಕಾರ ಪರಿವರ್ತನೆ ಮಾಡಿ ಸುದೀರ್ಘ ಚರ್ಚೆಗೆ ಅವಕಾಶ ಕೊಡಿ ಸರ್ಕಾರಕ್ಕೆ ಉತ್ತರ ಹೇಳುವುದಕ್ಕೆ ಅವಕಾಶ ಸಿಗುತ್ತದೆ. ಹಾಗೆ ಅಲ್ಲದೆ ನೀವು ಮೆನ್‌ಷನ್ ಮಾಡಿ ಹೊರಟು ಹೋದರೆ, ಸರ್ಕಾರದ ಮೇಲೆ ಹಾಗೂ ಮುಖ್ಯ ಮಂತ್ರಿಗಳ ಮೇಲೆ ಅಲಿಗೇಷನ್ ಮಾಡುತ್ತಿದ್ದರೆ ನಾವು ಯಾವ ರೀತಿ ಉತ್ತರ ಕೊಡಬೇಕು? ತಪ್ಪು ಸರಿ ಅಂತ ಅಲ್ಲ, ಹಾಗಿದ್ದರೆ ಈ ಕಾನೂನಿನ ಪುಸ್ತಕ ಏಕೆ ಇಟ್ಟುಕೊಂಡಿದ್ದೀರಿ? ಅದರ ಅಗತ್ಯ ಇಲ್ಲವಾ?

ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ :– ಅಧ್ಯಕ್ಷರು ಪರ್ಮಿಷನ್ ಕೊಟ್ಟಿದ್ದಾರೆ. ತಾವು ಐದು ನಿಮಿಷ ಕೂತುಕೊಂಡರೆ ಒಳ್ಳೆಯದು ಆಗಬಹುದು. ಅವರು ರೂರಲ್‌ನಲ್ಲಿ ಕನ್‌ವರ್ಟ್ ಮಾಡಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ :– ಅವರು ಬಂದಾಗ ಆಗಲಿ ಎಂದು ಮಾತನಾಡಿ ಎಂದು ಹೇಳಿದರು ತಾವು ಒಪ್ಪಿಕೊಂಡಿಲ್ಲ. ನಿಮಗೆ ಬಂದ ತಕ್ಷಣ ಕಾಯಿದೆ, ಹಸಿರು ಪುಸ್ತಕ ತೆಗೆಯುವುದು ಸರಿಯಾ?

ಶ್ರೀ ಡಿ.ಬಿ. ಚಂದ್ರೇಗೌಡ :– ಗಂಭೀರವಾಗಿ ಮಾತನಾಡೋಣ. ನಾನೂ ಸಂಸದೀಯ ನಡವಳಿಕೆಯಲ್ಲಿ 30 ವರ್ಷಗಳ ಕಾಲ ಕಳೆದಿದ್ದೇನೆ. ನಾನು ಕೇಳುವುದು ಶೂನ್ಯ ವೇಳೆಯಲ್ಲಿ ಈ ರೀತಿ ಚರ್ಚೆ ಮಾಡುವುದು ಅರ್ಥ ಇಲ್ಲ. ಅದನ್ನು ಕ್ರಮವಾದ ರೀತಿಯಲ್ಲಿ ಚರ್ಚೆ ಮಾಡಿ ಸರ್ಕಾರ ಉತ್ತರ ಹೇಳುವುದಕ್ಕೆ ಸದನಕ್ಕೆ ಉತ್ತರ ತರಿಸಿಕೊಡುವುದಕ್ಕೆ ಸಹಾಯವಾಗುತ್ತದೆ ಎಂದು ಹೆಳಿದೆ. ಸುಮ್ಮನೆ ಹೇಳಿ ಹೋಗುವುದು ಆದರೆ ಹೇಳಿ ಹೋಗಿ, ನನ್ನದು ಏನೋ ಅಬ್ಜೆಕ್ಷನ್ ಇಲ್ಲ. It is between the member and the Chair.

ಶ್ರೀ ಎಸ್.ಎಸ್. ಪಾಟೀಲ್ :– ಇದು ತಪ್ಪು ಮಾಡುತ್ತೀರಿ. ನಾನು ದೇವೇಗೌಡರ ಮಕ್ಕಳ ಉದಾಹರಣೆ ಕೊಟ್ಟು ಹೇಳಿದ್ದೇನೆ. ಎಲ್ಲರೂ ಸುಮ್ಮನೆ ಕೂತಿದ್ದಿರಿ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ :– ಕಾನೂನು ಸಚಿವರು ಹೇಳಿದ್ದಾರೆ ಎಂದರೆ, ಸರ್ಕಾರ ಇಕ್ಕಟ್ಟಿಗೆ ಸಿಗುವಾಗ ಕಾನೂನು ಬರುತ್ತದೆ. ಸರ್ಕಾರ ಇಕ್ಕಟ್ಟಿಗೆ ಸಿಗದೇ ಇರುವಾಗ ಕಾನೂನು ಬರುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ :– ಹಾಗಿದ್ದರೆ ಯಾರ ಕಾನೂನೂ ಬೇಡ ಹಾಗೆ ಮುಚ್ಚಿಟ್ಟು ಬಿಡಿ.

ಅಧ್ಯಕ್ಷರು :– ಶಿವಾನಂದ ಪಾಟೀಲರೇ, ಒಂದು ನಿಮಿಷದಲ್ಲಿ ಮುಗಿಸಬೇಕು.

ಶ್ರೀ ಶಿವಾನಂದ ಪಾಟೀಲ್ :– ಮಾನ್ಯ ಮುದ್ದಹನುಮೇಗೌಡರಿಗೆ 10 ನಿಮಿಷ ಕೊಟ್ಟಿದ್ದೀರಿ, ಆತ್ಮಾನಂದರವರಿಗೆ ಐದು ನಿಮಿಷ ಕೊಟ್ಟಿದ್ದೀರಿ. ನನಗೆ ಎರಡು ನಿಮಿಷ ಕೊಡಿ ಸಾಕು.

ಶ್ರೀ ಎಂ.ಎಸ್. ಆತ್ಮಾನಂದ :– ನಮ್ಮ ಜಿಲ್ಲೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕಾಗುತ್ತದೆ.

ಶ್ರೀ ಶಿವಾನಂದ ಎಸ್. ಪಾಟೀಲ್ :– ನಾಳೆ ಉತ್ತರ ಕೊಟ್ಟ ಮೇಲೆ ಕೊಡಿ.

ಶ್ರೀ ಎಂ.ಎಸ್. ಆತ್ಮಾನಂದ :– ನಾಳೆ ನಮಗೆ ಅವಕಾಶ ಕೊಡುತ್ತಾರಾ?

ಶ್ರೀ ಶಿವಾನಂದ ಎಸ್. ಪಾಟೀಲ್ :– ಮಂತ್ರಿಗಳು ಉತ್ತರ ಕೊಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ನೀವು ನಾಳೆ ಸ್ಪಷ್ಟೀಕರಣ ಕೊಡಿ.

Mr. Speaker :- You please continue.

Sri. Shivananda S. Patil :- A committee headed by Revenue Commissioner is visiting Mandya district to assess the crop damage.....

ಶ್ರೀ ಎಂ.ಎಸ್. ಆತ್ಮಾನಂದ :– ಯಾವುದೂ ಕೂಡ ಹೊಂದಾಣಿಕೆ ಇಲ್ಲ.

ಗೊಂದಲ

ಶ್ರೀ ಶಿವಾನಂದ ಎಸ್. ಪಾಟೀಲ್ :– ಅಧ್ಯಕ್ಷರೆ, ನನಗೆ ಗೊತ್ತಿರುವ ಹಾಗೆ ಕಾವೇರಿ ಬೇಸಿನ್‌ನಲ್ಲಿ ತಮಿಳುನಾಡಿಗೆ ನೀರು ಬಿಟ್ಟ ಮೇಲೆ ನಮ್ಮಲ್ಲಿರತಕ್ಕಂತಹ ಕ್ರಾಪ್ ಡ್ಯಾಮೇಜ್ ಆಗಿದೆ.

ಮಾದೇಗೌಡರು ಸ್ಟೇಟ್‌ಮೆಂಟ್ ಮಾಡಿದ ಮೇಲೆ, ಆತ್ಮಾನಂದರವರು ಸ್ಟೇಟ್‌ಮೆಂಟ್ ಮಾಡಿದ ಮೇಲೆ ಮುಖ್ಯ ಮಂತ್ರಿಗಳು ಮಂಡ್ಯ ಡಿಸ್ಟ್ರಿಕ್ಟ್‌ನಲ್ಲಿರುವ ಕಬ್ಬು ಎಷ್ಟು ಹಾನಿಯಾಗಿದೆ ಎಂದು ಅಸೆಸ್ ಮಾಡಲಿಕ್ಕೆ ರೆವಿನ್ಯೂ ಕಮಿಷನರ್ ಅಧ್ಯಕ್ಷತೆಯಲ್ಲಿ ಕಮಿಟಿ ರಚನೆ ಮಾಡಿದ್ದಾರೆ. ನಾನು ನಿಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳಿಗೆ ವಿನಂತಿ ಮಾಡುತ್ತೇನೆ, ಕಾವೇರಿ ಬೇಸಿನ್ ಅಷ್ಟೇ ಅಲ್ಲ, ಕೃಷ್ಣ ಬೇಸಿನ್‌ನಲ್ಲಿ ಕೂಡ ಕಬ್ಬು ಒಣಗಿದೆ. ಮಹಾರಾಷ್ಟ್ರ ಸರ್ಕಾರದವರು ನೀರು ಬಿಡದೇ ಇರುವುದರಿಂದ ಇಡೀ ಉತ್ತರ ಕರ್ನಾಟಕ ಜಿಲ್ಲೆಯಲ್ಲಿ ಬರತಕ್ಕಂತಹ ಮೂರು – ನಾಲ್ಕು ಜಿಲ್ಲೆಗಳಲ್ಲಿರತಕ್ಕಂತಹ ಕಬ್ಬು ಕೂಡ ಒಣಗಿದೆ. ನಾನು ವಿನಂತಿ ಮಾಡುತ್ತೇನೆ, ಮಾನ್ಯ ಮುಖ್ಯಮಂತ್ರಿಗಳು ಏನಾದರೂ ಆ ರೀತಿ ಆದೇಶ ಮಾಡಿದ್ದರೆ ಉತ್ತರ ಕರ್ನಾಟಕದಲ್ಲಿ ನೀರು ಇಲ್ಲದೆ ಎಷ್ಟು ಕಬ್ಬು ಒಣಗಿದೆ ಅದನ್ನು ಅಸೆಸ್ ಮಾಡಲಿಕ್ಕೆ ಇನ್ನು ಒಂದು ಕಮಿಟಿ ಮಾಡಿದರೆ ನಾವು ನಿಮಗೆ ಸ್ವಾಗತ ಮಡುತ್ತೇವೆ. ಅದು ಒಂದನೆಯದು. ಎರಡನೆಯದು ನನಗೆ ತಿಳಿದ ವರ್ತಮಾನದ ಪ್ರಕಾರ ಕಬ್ಬಿಗೆ ಅಣಿವಾರಿ ಡಿಕ್ಲೇರ್ ಮಾಡುವುದಕ್ಕೆ ಹೊರಟಿದ್ದಾರೆ. ಇದು ಆಗುತ್ತಾ ನೀವೇ ಹೇಳಿ. ಅಣಿವಾರಿ ಡಿಕ್ಲೇರ್ ಮಾಡಿದರೆ.....

ಶ್ರೀ ಎನ್ ಕರಿಯಣ್ಣ :– ಮಾನ್ಯ ಅಧ್ಯಕ್ಷರೆ, ಕೇಂದ್ರದವರು 600 ಕೋಟಿ ರೂಪಾಯಿಗಳನ್ನು ಅನೌನ್ಸ್ ಮಾಡಿದ್ದಾರೆ. ನಮ್ಮ ರಾಜ್ಯಕ್ಕೆ ಕೊಟ್ಟಿಲ್ಲ. ನಾವು ಕೊಡಬೇಕೆಂದು ಬೇಡಿಕೆ ಇಟ್ಟಿದ್ದೇವೆ. ನೀವು ರಾಜ್ಯದ ಚರ್ಚೆ ಮಾಡುತ್ತಿದ್ದೀರಿ. ನೀವು ಯಾವ ರೀತಿ ಚರ್ಚೆಗೆ ಅವಕಾಶ ಕೊಡುತ್ತೀರಿ?

ಶ್ರೀ ಶಿವಾನಂದ ಪಾಟೀಲ್ :– ಏನು ಅಧ್ಯಕ್ಷರೇ, ನೀವೂ ಆ ರೀತಿ ಮಾತನಾಡಿದರೆ?

ಅಧ್ಯಕ್ಷರು :– ಕೇಂದ್ರ ಸರ್ಕಾರದ ಬಗ್ಗೆ ಮಾತನಾಡಬೇಡಿ. ಈ ವಿಚಾರವನ್ನು ಇಲ್ಲಿಗೇ ಮುಕ್ತಾಯ ಮಾಡುತ್ತೇನೆ. ನೀವು ಬೇಗ ಮುಗಿಸದೆ ಇದ್ದರೆ ಈ ವಿಷಯವನ್ನು ಇಲ್ಲಿಗೇ ಮುಕ್ತಾಯ ಮಾಡುತ್ತೇನೆ.

ಗೊಂದಲ

ಶ್ರೀ ಡಿ.ಬಿ. ಚಂದ್ರೇಗೌಡ :– ಮಾನ್ಯ ಅಧ್ಯಕ್ಷರೆ, ರಿವ್ಯೂ ಮಾಡಿ ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು :– ಸಂಸದೀಯ ವ್ಯವಹಾರ ಸಚಿವರು ಹೇಳಿದ ಹಾಗೆ ಇದು ಬಹಳ ಮುಖ್ಯವಾದ ವಿಷಯ ಇದು ಒಂದು ದಿವಸ ಚರ್ಚೆಗೆ ಕೊಡಿ ಎಂದು ಹೇಳುತ್ತಿದ್ದಾರೆ. I will take the sense of the House whether we will discuss here on some other day.

ಶ್ರೀ ಜಗದೀಶ್ ಶೆಟ್ಟರ್ :– ಚರ್ಚೆ ಪ್ರಾರಂಭವಾಗಿದೆ ಇವತ್ತೇ ಚರ್ಚೆಯಾಗಲಿ.

ಅಧ್ಯಕ್ಷರು :– ಇದು ಬಹಳ ಮುಖ್ಯವಾದ ವಿಷಯ. ನಮ್ಮ ಮುಂದೆ ಸಮಯ ಇಲ್ಲ. ರೂಲ್ 69ರ ಪ್ರಕಾರ ಕಳುಹಿಸಿ ಇನ್ನೊಂದು ದಿವಸ ತೆಗೆದುಕೊಳ್ಳೋಣ. ಇದನ್ನು ಇಲ್ಲಿಗೇ ಮುಕ್ತಾಯ ಮಾಡೋಣ. ಮುಖ್ಯ ಮಂತ್ರಿಗಳ ಬಗ್ಗೆ ಹೇಳಿದರು ಅದರ ಬಗ್ಗೆ ಉತ್ತರ ಕೊಡಿ.

ಅಧ್ಯಕ್ಷರು :– ಶ್ರೀ ಕೆ.ಎಂ. ಕೃಷ್ಣಮೂರ್ತಿಯವರು

(2) ವಿಷಯ :– ದಿ.2.6.2003 ರಂದು ತರೀಕೆರೆ ಕೃಷಿ ಅಧಿಕಾರಿ ಆತ್ಮಹತ್ಯೆ ಮಾಡಿಕೊಂಡ ಬಗ್ಗೆ

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) :– ಸನ್ಮಾನ್ಯ ಅಧ್ಯಕ್ಷರೆ, ಒಂದು ಮಹತ್ತರವಾದ ವಿಷಯವನ್ನು ಈ ಸಂದರ್ಭದಲ್ಲಿ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಅಭಿನಂದಿಸಿ,